ನಡೆಯದೇ ಸುಮ್ಮನೆ ಈ ತರಹ ನಿಂತುಕೊಂಡಿದ್ದರೆ ಏನೂ ಪ್ರಯೋಜನವಾಗುವುದಿಲ್ಲ.

(ಗೊಂದಲ)

ಅಧ್ಯಕ್ಷರು:– ಈಗ ಸದನವನ್ನು ಹತ್ತು ನಿಮಿಷಗಳ ಅವಧಿಗೆ ಮುಂದೂಡಲಾಗಿದೆ.

[ಸದನವನ್ನು ಮಧ್ಯಾಹ್ನ 12.15 ಗಂಟೆಗೆ ಹತ್ತು ನಿಮಿಷಗಳ ಅವಧಿಗೆ ಮುಂದೂಡಲಾಯಿತು]

(ಸದನವು ಮಧ್ಯಾಹ್ನ 12 ಗಂಟೆ 47 ನಿಮಿಷಕ್ಕೆ ಮತ್ತೆ ಪುನರ್ ಸಮಾವೇಶಗೊಂಡಿತು. ಅಧ್ಯಕ್ಷ ಪೀಠದಲ್ಲಿ ಸನ್ಮಾನ್ಯ ಸಭಾಧ್ಯಕ್ಷರಾದ ಶ್ರೀ ಕೆ.ಜಿ.ಬೋಪಯ್ಯನವರು ಉಪಸ್ಥಿತರಿದ್ದರು)

(ಸದನದ ಬಾವಿಯಲ್ಲಿ ಜೆ.ಡಿ.(ಎಸ್)ಪಕ್ಷದ ಶಾಸಕರು ಧರಣಿನಿರತರಾಗಿದ್ದರು)

2. ವಿಷಯ:– ಕಾವೇರಿ ನೀರಿನ ವಿಚಾರದ ಬಗ್ಗೆ

ಅಧ್ಯಕ್ಷರು:– ಈಗ ಮಾನ್ಯ ಮುಖ್ಯಮಂತ್ರಿಗಳು statement ಮಾಡುತ್ತಾರೆ. ಅಲ್ಲಿಯವರೆಗೆ ಸದನದ ಬಾವಿಯಲ್ಲಿರುವ ಮಾನ್ಯ ಸದಸ್ಯರುಗಳು ದಯವಿಟ್ಟು ತಮ್ಮ ತಮ್ಮ ಸ್ಥಾನಗಳಿಗೆ ಹೋಗಿ ಕುಳಿತುಕೊಳ್ಳಬೇಕು.

(ಸದನದ ಬಾವಿಯಲ್ಲಿದ್ದ ಜೆ.ಡಿ.(ಎಸ್)ಪಕ್ಷದ ಶಾಸಕರುಗಳು ತಮ್ಮ ತಮ್ಮ ಸ್ಥಾನಗಳಿಗೆ ತೆರಳಿದರು)

ಶ್ರೀ ಬಸವರಾಜ ಬೊಮ್ಮಾಯಿ (ಜಲ ಸಂಪನ್ಮೂಲ ಸಚಿವರು): ಮಾನ್ಯ ಅಧ್ಯಕ್ಷರೆ, ಸನ್ಮಾನ್ಯ ವಿರೋಧ ಪಕ್ಷದ ನಾಯಕರಾದ ಮಾನ್ಯ ಸಿದ್ದರಾಮಯ್ಯನವರು ಮತ್ತು ಜನತಾ ದಳದ ಸಭಾ ನಾಯಕರಾದ ಮಾನ್ಯ ರೇವಣ್ಣನವರು. ಹೇಳಿಕೆ ಮಾಡಬೇಕೆಂದು ಹೇಳಿದ್ದಾರೆ.

ಶ್ರೀ ಸಿದ್ದರಾಮಯ್ಯ (ವಿರೋಧ ಪಕ್ಷದ ನಾಯಕರು):– ಮಾನ್ಯ ಸಚಿವರೆ, ನಾನು ಕಾವೇರಿ ನೀರಿನ ವಿಚಾರದಲ್ಲಿ ಕೆಲವು ಮಾತುಗಳನ್ನಾಡಬೇಕಿದೆ. ನಾನು ಮಾತನಾಡಿದ ನಂತರ ತಾವು ತಮ್ಮ ಹೇಳಿಕೆಯನ್ನು ಕೊಡಿ.

ಶ್ರೀ ಬಸವರಾಜ ಬೊಮ್ಮಾಯಿ:– ಆಯಿತು.

ಶ್ರೀ ಸಿದ್ದರಾಮಯ್ಯ(ವಿರೋಧ ಪಕ್ಷದ ನಾಯಕರು):– ಮಾನ್ಯ ಅಧ್ಯಕ್ಷರೆ, ಈಗ ಸರ್ವೋಚ್ಚ ನ್ಯಾಯಾಲಯ ಎರಡು ದಿನಗಳ ಹಿಂದೆ 2 ಟಿ.ಎಂ.ಸಿ ನೀರನ್ನು ಬಿಡಬೇಕೆಂದು ಆದೇಶ ಮಾಡಿದ್ದರು. ನಾವು ನ್ಯಾಯಾಲಯದಲ್ಲಿ ನಮ್ಮ ವಾದವನ್ನು ಮಂಡಿಸಿದ್ದೇವೆ. ನಮ್ಮ ಬೆಳೆಗಳಿಗೇ ನೀರಿಲ್ಲ, ಕುಡಿಯುವುದಕ್ಕೆ ನೀರಿಲ್ಲ, ಬೆಳೆಗಳಂತೂ ಹೋಯಿತು, ಈಗ ಕುಡಿಯುವುದಕ್ಕೇ ನೀರಿಲ್ಲವಾಗಿದೆ. ಬೆಂಗಳೂರು ನಗರದಲ್ಲಿ 1 ಕೋಟಿ ಜನರಿದ್ದಾರೆ. ಆ ಒಂದು ಕೋಟಿ ಜನಗಳಿಗೆ ಕನಿಷ್ಠ ಒಂದು ತಿಂಗಳಿಗೆ 2 ಟಿ.ಎಂ.ಸಿ. ಯಷ್ಟು ನೀರು ಬೇಕಾಗುತ್ತದೆ. ಬೆಂಗಳೂರು ನಗರಕ್ಕೆ, ಮೈಸೂರಿಗೆ, ಹಳ್ಳಿಗಳಿಗೆ, ತಾಲ್ಲೂಕು ಕೇಂದ್ರಗಳಿಗೆ ಮತ್ತು ಸುಮಾರು 45 ಟೌನ್‌ಗಳಿಗೆ ಇನ್ನೂ ಮೂರು ತಿಂಗಳು ಕುಡಿಯುವ ನೀರು ಬೇಕು. ಇಂಥ ಪರಿಸ್ಥಿತಿ ನಮ್ಮಲ್ಲಿದೆ. ನಾವು ಒಂದು ತೊಟ್ಟು ನೀರನ್ನು ಕೊಡುವುದಕ್ಕೂ ಕೂಡ ನಮ್ಮಲ್ಲಿ ಸಾಧ್ಯವಿಲ್ಲ. ಒಂದು ತೊಟ್ಟು ನೀರು ಬಿಡುವುದಕ್ಕೂ ಕೂಡ ಆಗುವುದಿಲ್ಲ. ಕೆ.ಆರ್.ಎಸ್.ನಲ್ಲಿ ನೀರಿಲ್ಲ, ಕಬಿನಿಯಂತೂ ಒಣಗಿ ಹೋಗಿದೆ, ಹಾರಂಗಿಯಲ್ಲಿ ನೀರಿಲ್ಲ, ಹೇಮಾವತಿಯಲ್ಲಿ ನೀರಿಲ್ಲ. ಹೀಗಾಗಿ ಕುಡಿಯುವುದಕ್ಕೂ ಕೂಡ ನೀರಿಲ್ಲದ ಪರಿಸ್ಥಿತಿಯನ್ನು ನಾವು ಎದುರಿಸುತ್ತಿದ್ದೇವೆ. ಸುಪ್ರೀಂ ಕೋರ್ಟ್‌ನವರು ಒಂದು ಕಮಿಟಿಯನ್ನು ಮಾಡಿದರು. ಸುಪ್ರೀಂ ಕೋರ್ಟ್‌ನವರು ಅಲ್ಲಿಗೆ ಹೋದರೆ, ತಮಿಳುನಾಡಿನವರು ನಮಗೆ 9 ಟಿ.ಎಂ.ಸಿ ನೀರು ಬೇಕೆಂದು ಕೇಳಿದ್ದರು. ಮೆಟ್ಟೂರಿನಲ್ಲಿ ಈಗ 2 ಟಿ.ಎಂ.ಸಿ. ನೀರು ಅವರಿಗೆ ಬೇಕಾಗಿರುವುದು. ಮೆಟ್ಟೂರಿನಲ್ಲಿ ಅವರಿಗೆ ಬೇಕಾಗಿರತಕ್ಕಂಥ ನೀರಿದೆ. ಅವರೇನು ಈಗ ಹೇಳುತ್ತಿದ್ದಾರಲ್ಲ, ಬೆಳೆ ಒಣಗಿಹೋಗುತ್ತದೆ, ರೈತರು ಆತ್ಮಹತ್ಯೆ ಮಾಡಿಕೊಂಡು ಬಿಡುತ್ತಾರೆ, ಬೆಳೆ ನಷ್ಟವಾಗಿ ಬಿಡುತ್ತದೆ ಎಂದು ಏನೇನು ಹೇಳುತ್ತಿದ್ದಾರಲ್ಲ ಅವೆಲ್ಲವೂ ಸತ್ಯಕ್ಕೆ ದೂರವಾದುದು ಎಂದು ಕಮಿಟಿಯವರು ವರದಿ ಕೊಟ್ಟಿದ್ದಾರೆ. ತಮಿಳುನಾಡಿನವರು ಹೇಳಿರತಕ್ಕಂಥದ್ದು ಸರಿಯಾದುದಲ್ಲ, ಸತ್ಯಕ್ಕೆ ದೂರವಾದುದು, ಅದರಲ್ಲಿ ಸತ್ಯಾಂಶವಿಲ್ಲವೆಂದು ಹೇಳಿದ್ದಾರೆ. ಇಷ್ಟಾದರೂ ಕೂಡ ಸುಪ್ರೀಂ ಕೋರ್ಟ್‌ನಿಂದ ನಮಗೆ ಒಂದು ಬರೆ ಹಾಕಿಬಿಟ್ಟಿದೆ. ನಮಗೆ ನೂರು ಕ್ಯೂಸೆಕ್ಸ್ ನೀರು ಕೊಡುವುದಕ್ಕೂ ಕೂಡ ಅವಕಾಶ ಇಲ್ಲ. ಮೇ ತಿಂಗಳವರೆಗೆ ಕುಡಿಯುವ ನೀರು ನಮಗೆ ಆಗುವಂತಹ ರೀತಿಯಲ್ಲಿ ನೋಡಿಕೊಳ್ಳುವುದಕ್ಕೆ ಕಷ್ಟವಾಗುತ್ತದೆ. ಬೇಸಿಗೆ ಬೆಳೆಯಂತೂ ಇಲ್ಲವೇ ಇಲ್ಲ ಬಿಡಿ. ಕಬ್ಬಿಗೆ ಮತ್ತು ಬೇರೆ

perennial cropsಗೂ ನೀರಿಲ್ಲ. ಭತ್ತ ಬೆಳೆಯುವ ಹಾಗೆ ಇಲ್ಲ ಮತ್ತು ಯಾವ ಬೆಳೆಯನ್ನೂ ಕೂಡ ಹಾಕುವ ಆಗಿಲ್ಲ, ಆ ತರಹ ಪರಿಸ್ಥಿತಿ ಇದೆ. ನಾನು ಸರ್ಕಾರಕ್ಕೆ ಮನವಿ ಮಾಡುವುದೇನೆಂದರೆ ದಯಮಾಡಿ ತಾವು ಸ್ವಲ್ಪ ಧೈರ್ಯ ತೆಗೆದುಕೊಳ್ಳಬೇಕು. ಈ ಆದೇಶದ ಪ್ರಕಾರ 2.44 ಎಂದರೆ ಸುಮಾರು 2.50 ಟಿಎಂಸಿ ನೀರನ್ನು ಬಿಡಬೇಕು. ಆ ನೀರನ್ನು ಎಲ್ಲಿಂದ ಬಿಡುವುದು? ಆ ನೀರನ್ನು ಕೆಆರ್‌ಎಸ್‌ನಿಂದ ಬಿಡಬೇಕು. Inflow ಅಂತೂ ಇಲ್ಲವೇ ಇಲ್ಲ, outflow ನದಿಗೆ ನಾವು 200–300 ಕ್ಯೂಸೆಕ್ಸ್ ನೀರು ಬಿಡಲೇಬೇಕು. Inflow 150–200 ಕ್ಯೂಸೆಕ್ಸ್ ಇದೆ. ಈಗ ಮಳೆಯಂತೂ ಬರುವುದಿಲ್ಲ. ಯಾವ ರೀತಿ ಮಾಡಬೇಕು? ನಮ್ಮ ಪರಿಸ್ಥಿತಿಯನ್ನು ನಿಮ್ಮ ಲಾಯರ್‌ಗಳು ಸರಿಯಾಗಿ ಕೋರ್ಟ್‌ನಲ್ಲಿ ಗಮನಕ್ಕೆ ತಂದಿದ್ದಾರೋ ಇಲ್ಲವೋ ಎನ್ನುವ ಅನುಮಾನ ಆಗಿಬಿಟ್ಟಿದೆ. ನಾನು ಮಾನ್ಯ ಮುಖ್ಯಮಂತ್ರಿಗಳಲ್ಲಿ ಮನವಿ ಮಾಡತಕ್ಕಂಥಾದ್ದು ಏನೆಂದರೆ ನೀವು ದೆಹಲಿಗೆ ಹೋಗಬೇಕು. ಅಲ್ಲಿ ಕುಳಿತುಕೊಂಡು ಅಲ್ಲಿ I.A.ಹಾಕಿಸಬೇಕು. I.A.ಹಾಕಿಸಿ, ನಮಗೆ ಕೊಡುವುದಕ್ಕೆ ಆಗುವುದಿಲ್ಲ ಎಂದು ವಾದವನ್ನು ಮಂಡಿಸಿ, ನಮ್ಮ ground reality ಅನ್ನು ಅವರಿಗೆ ಮನವರಿಕೆ ಮಾಡಿಕೊಡುವಂತಹ ಕೆಲಸವನ್ನು ಮಾಡಬೇಕು. ಒಂದು ವೇಳೆ ಸುಪ್ರೀಂ ಕೋರ್ಟ್ ಆದೇಶ ಏನಾದರೂ ಪಾಲನೆ ಆಗಿಬಿಟ್ಟರೆ ನಮ್ಮವರೆಲ್ಲಾ ಕುಡಿಯುವುದಕ್ಕೆ ನೀರಿಲ್ಲದೆ ಸತ್ತು ಹೋಗಿಬಿಡುತ್ತಾರೆ. ಖಾಯಿಲೆಗಳಿಗೆ ತುತ್ತಾಗಿ ಬಿಡುತ್ತಾರೆ. ನಾವು ಕರ್ನಾಟಕದವರು ಬಹಳ ಕಷ್ಟದ ಪರಿಸ್ಥಿತಿಯನ್ನು ಎದುರಿಸಬೇಕಾಗುತ್ತದೆ. ತಮಿಳುನಾಡಿನಲ್ಲಿ ಬೆಳೆ ಒಣಗುತ್ತದೆ ಎಂದು ಹೇಳಿದ್ದಾರೆ. ಮೆಟ್ಟೂರು ಡ್ಯಾಂನಲ್ಲಿ ನೀರಿದೆ. ಮೆಟ್ಟೂರು ಡ್ಯಾಂನಿಂದ ಎರಡು ಟಿಎಂಸಿ ನೀರು ಕೊಡಿ, ಅದನ್ನು compensate ಮಾಡಿ ಎಂದು ನಮಗೆ ಆದೇಶ ಮಾಡಿರುವುದು. ಅದನ್ನು compensate ಮಾಡಬೇಕಾದಂತಹ ಅಗತ್ಯವಿಲ್ಲ. ಮೆಟ್ಟೂರಿನಲ್ಲಿ ನೀರು ಇಲ್ಲದಿದ್ದರೆ ಅವರು ಎಲ್ಲಿಂದ ನೀರು ಬಿಡುತ್ತಾರೆ? ಅಲ್ಲಿ ನೀರು ಇರುವುದರಿಂದಲೇ ನೀರು ಬಿಡುತ್ತಾರೆ. ಅದನ್ನು compensate ಮಾಡುವುದಕ್ಕೆ ಕರ್ನಾಟಕದಲ್ಲಿ ಕುಡಿಯುವುದಕ್ಕೆ ಬೇಕೆಂದು ಇಟ್ಟುಕೊಂಡಿರುವಂತಹ ನೀರನ್ನು reservoirನಿಂದ ಕೊಡಿ ಎಂದು ಹೇಳಿರತಕ್ಕಂಥಾದ್ದು ನ್ಯಾಯಸಮ್ಮತವಲ್ಲ. ಇದು natural justice ಕೂಡ ಅಲ್ಲ. ತಮಿಳುನಾಡಿಗೆ ನೀರು ಬೇಕೆಂದು ಹೇಳಿದಾಗ ಕೃಷ್ಣಾ ನದಿಯಿಂದ ಐದು ಟಿಎಂಸಿ ನೀರು ಕೊಟ್ಟಿದ್ದೇವೆ. ಇದನ್ನೆಲ್ಲಾ

ಮಾನವೀಯತೆಯಿಂದ ನೋಡಬೇಕಾಗುತ್ತದೆ. ಕುಡಿಯುವ ನೀರಿಗೆ ನಾವು ಬಹಳ ಆದ್ಯತೆ ಮೇಲೆ ಮಾಡಬೇಕಾಗಿರುವುದು. ಇದನ್ನು ತಮಿಳುನಾಡಿನವರೂ ಕೂಡ ಅರ್ಥ ಮಾಡಿಕೊಳ್ಳಬೇಕು. ನಾವು ಕೆಳಗಡೆ ಬಿದ್ದಿದ್ದೇವೆಂದು ಹೇಳಿ ಅವರು ಹೇಳಿದಂತೆ ಆಗಬೇಕೆಂದು ಹೊರಟಿದ್ದಾರೆ. ನಾನು ಮಾನ್ಯ ಮುಖ್ಯಮಂತ್ರಿಗಳಿಗೆ ಹಾಗೂ ನೀರಾವರಿ ಮಂತ್ರಿಗಳಿಗೂ ಹೇಳುವುದೇನೆಂದರೆ ಸರ್ಕಾರ ಸ್ವಲ್ಪ ಧೈರ್ಯ ಮಾಡಬೇಕು ಮತ್ತು ಗಡಸಾದಂತಹ ನಿಲುವನ್ನು ತೆಗೆದುಕೊಳ್ಳಬೇಕಾಗುತ್ತದೆ. ನೀವು ತಕ್ಷಣ ಹೋಗಿ ನಮ್ಮ ಲಾಯರ್ ಜೊತೆ ಕುಳಿತುಕೊಂಡು ಚರ್ಚೆ ಮಾಡಿ. ನನಗೆ ಅನಿಸುವುದೇನೆಂದರೆ ನೀವು ಅವರ ಜೊತೆಗೆ ಇನ್ನು ಯಾರಾದರೂ ಲಾಯರನ್ನು ಅವರ ಜೊತೆ engage ಮಾಡುವುದಿದ್ದರೆ ಮಾಡಿ. ಅದಕ್ಕೆ ಎಷ್ಟಾದರೂ ಖರ್ಚಾಗಲಿ, ನಾವು ನಮ್ಮ ರೈತರನ್ನು, ನಮ್ಮ ಭಾಗದ ಜನರನ್ನು ಸಾಯಿಸುವುದಕ್ಕೆ ಆಗುವುದಿಲ್ಲ. ಸರ್ಕಾರ ಕೂಡಲೇ ಯಾವ ಕಾರಣಕ್ಕೂ ಕೂಡ ನೀರು ಬಿಡುವುದಿಲ್ಲವೆನ್ನುವ ವಾದವನ್ನು ಮಂಡಿಸಬೇಕು, ನಮ್ಮಲ್ಲಿ ನೀರಿಲ್ಲ ಎನ್ನುವುದನ್ನು ಹೇಳಬೇಕು, ನಮ್ಮ ವಾಸ್ತವಿಕವಾದಂತಹ ಪರಿಸ್ಥಿತಿಯನ್ನು ಅವರ ಗಮನಕ್ಕೆ ತರಬೇಕಾಗುತ್ತದೆ. ಈ ರೀತಿ ಮಾಡಬೇಕೆಂದು ನಾನು ಒತ್ತಾಯ ಮಾಡುತ್ತೇನೆ. ದಯಮಾಡಿ ಯಾವುದೇ ಕಾರಣಕ್ಕೂ ಕೋರ್ಟಿನ ಆದೇಶವನ್ನು ಉಲ್ಲಂಘನೆ ಮಾಡಿ ಎಂದು ಹೇಳುವುದಿಲ್ಲ, ಉಲ್ಲಂಘನೆ ಮಾಡಬೇಕೆಂದು ಹೇಳುವುದಕ್ಕಾಗುವುದಿಲ್ಲ. ನಮಗೆ ಕೋರ್ಟ್ ಬಗ್ಗೆ ಗೌರವ ಇದೆ, ಗೌರವಿಸಬೇಕು. ಆದರೆ ಈ ರೀತಿ ಆದೇಶಗಳನ್ನು ಪಾಲನೆ ಮಾಡುವುದು ಬಹಳ ಕಷ್ಟ. ದಯವಿಟ್ಟು ಇದಕ್ಕೆ ಒಪ್ಪಬೇಡಿ ಎಂದು ನಾನು ಸರ್ಕಾರವನ್ನು ಒತ್ತಾಯ ಮಾಡುತ್ತೇನೆ.

ಶ್ರೀ ಹೆಚ್.ಡಿ. ರೇವಣ್ಣ:– ಮಾನ್ಯ ಅಧ್ಯಕ್ಷರೆ, ಇವತ್ತು ಸುಪ್ರೀಂ ಕೋರ್ಟ್‌ನಿಂದ forth with ಅಥವಾ 48 ಗಂಟೆಯೊಳಗೆ 2.4 ಟಿಎಂಸಿ ನೀರು ಬಿಡಬೇಕೆಂದು ಹೇಳಿ ಆದೇಶವನ್ನು ಮಾಡಿದ್ದಾರೆಂದು ವಿಷಯ ಇದೆ. ಅದಕ್ಕೆ ಒಂದು ಹೇಳಿಕೆಯನ್ನು ತರಿಸಿಕೊಡುತ್ತೇವೆನ್ನುವ ಭಾವನೆಯನ್ನು ಮಾನ್ಯ ನೀರಾವರಿ ಮಂತ್ರಿಗಳು ವ್ಯಕ್ತಪಡಿಸಿದ್ದಾರೆ. ಆದರೆ ನಮಗೆ ಬಂದಿರುವ ಮಾಹಿತಿ ಪ್ರಕಾರ ನಮ್ಮ ಕರ್ನಾಟಕವನ್ನು ಪ್ರತಿನಿಧಿಸುವಂತಹ ಲಾಯರ್ ಅವರು ಸುಪ್ರೀಂ ಕೋರ್ಟ್‌ನಲ್ಲಿ ಕರ್ನಾಟಕದಲ್ಲಿ ಕುಡಿಯುವ ನೀರಿಲ್ಲ ಎನ್ನುವ ವಿಚಾರವನ್ನು ಗಮನಕ್ಕೆ ತರಬೇಕಾಗಿತ್ತು. ಅದನ್ನು ಕೋರ್ಟ್‌ನ ಗಮನಕ್ಕೆ ತಂದಿಲ್ಲವೆನ್ನುವ

ಮಾಹಿತಿ ಇದೆ. ಬೆಳೆ ವಿಚಾರ ಬಿಡಿ, ನಮಗೆ ಬೆಳೆ ಬೇಕಿಲ್ಲ. ಆದರೆ ಕುಡಿಯುವುದಕ್ಕೆ ಆದರೂ ನೀರು ಬೇಕಲ್ಲ? ನಮ್ಮ ಹತ್ತಿರ ಎಲ್ಲಾ ಸೇರಿ ಎಷ್ಟು ಟಿಎಂಸಿ ನೀರಿದೆ? ಹೇಮಾವತಿಯಲ್ಲಿ 5 ಟಿಎಂಸಿ, ಕೆಆರ್ಎಸ್ ನಲ್ಲಿ 6 ಟಿಎಂಸಿ ನೀರು ಇದ್ದು, ಎಲ್ಲಾ ಸೇರಿಸಿ 12 ಟಿಎಂಸಿ ನೀರು ಇರಬಹುದು. ಈಗ ಇನ್ನೂ ಫೆಬ್ರವರಿ ತಿಂಗಳು, ಮಾರ್ಚ್, ಏಪ್ರಿಲ್ ತಿಂಗಳು ಆದಮೇಲೆ ಮೇ ತಿಂಗಳಿನಲ್ಲಿ ಮಳೆಯಾದರೆ ಆಗಬಹುದು, ಆಗದಿದ್ದರೆ ಮಳೆ ಇಲ್ಲ. ಕಳೆದ ಮಾರ್ಚ್ 2011 ರಿಂದ ಇಲ್ಲಿಯವರೆಗೆ ತೆಗೆದುಕೊಂಡರೆ ಎಷ್ಟು ನೀರು ಬಂದಿದೆ ಎನ್ನುವ ಮಾಹಿತಿಯನ್ನು ನೀವು ತರಿಸಿಕೊಳ್ಳಬೇಕಾಗುತ್ತದೆ ಮತ್ತು ಅದನ್ನು ಸುಪ್ರೀಂ ಕೋರ್ಟ್ ಗಮನಕ್ಕೆ ತರಬೇಕಲ್ಲ? ಬೆಂಗಳೂರು ನಗರ, ಮೈಸೂರು, ಜಿಲ್ಲಾ ಕೇಂದ್ರಗಳು ಇರಬಹುದು, ಕಾವೇರಿ ಬೇಸಿನ್‌ನಲ್ಲಿ ಬರುವಂತಹ ತಾಲ್ಲೂಕು ಕೇಂದ್ರಗಳಿಗಿರಬಹುದು, ಇವುಗಳಿಗೆ ಕುಡಿಯುವ ನೀರಿಗೆ ವ್ಯವಸ್ಥೆಗೆ ಎಷ್ಟು ಬೇಕು? ಕುಡಿಯುವ ನೀರಿನ ವ್ಯವಸ್ಥೆಗೆ ನೀವು first priority ಇಡಬೇಕು. ಕುಡಿಯುವುದಕ್ಕೆ ನೀರು ಕೊಟ್ಟರೆ, ಬೆಳೆ ಬೆಳೆದುಕೊಳ್ಳುವುದು ಬಿಡುವುದು Second crop ಆಮೇಲೆ ನೋಡಿಕೊಳ್ಳೋಣ. ಆದರೆ ಈಗ ತಮಿಳುನಾಡಿನವರು ಕೇಳುತ್ತಿರುವುದು ಏಕೆ? ನಮಗೆ ಇವತ್ತು ಸಾಂಬಾ ಬೆಳೆಗೆ ನೀರಿಲ್ಲವೆಂದು ಕೇಳುತ್ತಿದ್ದಾರೆ. ಮೊನ್ನೆ ಕೇಂದ್ರ ಸರ್ಕಾರ ತಮಿಳುನಾಡಿಗೆ ಒಂದು ಕೇಂದ್ರ ತಂಡವನ್ನು ಕಳುಹಿಸಿತ್ತು, ಅಲ್ಲಿಗೆ ಮಾತ್ರ ಕಳುಹಿಸುವುದಲ್ಲ, ಕರ್ನಾಟಕಕ್ಕೂ ಕಳುಹಿಸಬೇಕಾಗುತ್ತದೆ. ಕೇಂದ್ರ ಸರ್ಕಾರ ಇವತ್ತು ಬರಿ ರಾಜ್ಯ ಸರ್ಕಾರದ ವಕೀಲರ ಮೇಲೆ depend ಆಗಬಾರದು. ಬೇರೆ ರಾಜ್ಯಗಳ ಹಿತವನ್ನು ಕಾಪಾಡುವಂತಹ ವಿಚಾರದಲ್ಲಿ ಕೇಂದ್ರ ಸರ್ಕಾರ ಮುಂದಾಗಬೇಕಾಗುತ್ತದೆ. ಕೇಂದ್ರ ಸರ್ಕಾರ ನಮ್ಮ ರಾಜ್ಯದಲ್ಲಿ ಯಾವ್ಯಾವ ಡ್ಯಾಂನಲ್ಲಿ ಎಷ್ಟು ನೀರಿದೆ, ತಮಿಳುನಾಡಿನ ಡ್ಯಾಂಗಳಲ್ಲಿ ಎಷ್ಟು ನೀರಿದೆ ಎಂದು ಎರಡೂ ರಾಜ್ಯದಲ್ಲಿರುವಂತಹ ನೀರನ್ನು ಅವಲೋಕನ ಮಾಡಲಿ. ಆಮೇಲೆ ಬೇಕಾದರೆ ನಿರ್ಣಯ ಮಾಡಿದರೆ, ನಮ್ಮಲ್ಲಿ ನೀರು ಹೆಚ್ಚಿಗೆ ಇದ್ದರೆ ಕೊಡಲಿ. ನಾವು ಅವರ ಜೊತೆ ಕಾಲು ಕೆರೆದುಕೊಂಡು ಜಗಳ ಮಾಡಬೇಕೆಂದು ಏನಿಲ್ಲ. ಇವತ್ತು ವಸ್ತುಸ್ಥಿತಿಯನ್ನು ತಿಳಿಸುವುದರಲ್ಲಿ ನಮ್ಮ ಲಾಯರ್ ಹಿಂದೆ ಬಿದ್ದಿದ್ದಾರೆ ಎಂದು ನನಗೆ ಭಾವನೆ ಇದೆ. ಇವತ್ತು ಮೊದಲನೇ ಆದ್ಯತೆ ಕುಡಿಯುವ ನೀರಿಗೆ ಕೊಡಿ. ಆಮೇಲೆ ಭತ್ತ ಬೆಳೆಯುತ್ತೀರೋ, ಕಬ್ಬು ಬೆಳೆಯುತ್ತೀರೋ, ಅದು ಬೇರೆ.

ನಮ್ಮ ಮಂಡ್ಯ ಜಿಲ್ಲೆಯಲ್ಲಿ ಕಬ್ಬು 12 ತಿಂಗಳ ಬೆಳೆ. ಆ ಬೆಳೆಯನ್ನು ಉಳಿಸಬೇಕೋ ಬೇಡವೋ? ನಮ್ಮ ಕಬ್ಬು standing crop ಇದೆಯಲ್ಲಾ ಅದನ್ನು ಉಳಿಸುವುದಕ್ಕೆ ಆಗುತ್ತದೆಯೇ? ಈ ಪರಿಸ್ಥಿತಿ ಇರುವಾಗ ನಾವು ಕೇಂದ್ರ ಸರ್ಕಾರಕ್ಕೂ ಮನವಿ ಮಾಡಬೇಕಾಗುತ್ತದೆ. ಈ ರಾಜ್ಯದ ಹಿತ ಕಾಪಾಡುವುದರಲ್ಲಿ ಕೇಂದ್ರ ಸರ್ಕಾರ ಮಧ್ಯಪ್ರವೇಶ ಮಾಡಿ ಎಂದು ಪ್ರಧಾನ ಮಂತ್ರಿಗಳಿಗೆ ಮನವಿ ಮಾಡಬೇಕಾಗುತ್ತದೆ. ಮಾನ್ಯ ಮುಖ್ಯಮಂತ್ರಿಗಳು ಹಿಂಜರಿಯುತ್ತಿದ್ದಾರೆ. ಮಾನ್ಯ ಪ್ರಧಾನ ಮಂತ್ರಿಗಳನ್ನು ಭೇಟಿ ಮಾಡಿ, ಈ ರಾಜ್ಯದ ಪರಿಸ್ಥಿತಿ ಹೇಳುವುದಕ್ಕೆ ನಿಮಗೆ ತೊಂದರೆಯಾಗಿರುವುದು ಏನು? ನಿಮ್ಮ ಜೊತೆಗೆ ಮಾನ್ಯ ವಿರೋಧ ಪಕ್ಷದ ನಾಯಕರನ್ನು ಕರೆದುಕೊಳ್ಳಿ. ಈ ವಿಚಾರದಲ್ಲಿ ಪಕ್ಷಾತೀತವಾಗಿ ಹೋಗಬೇಕಾಗುತ್ತದೆ. ಅದು ಬಿಟ್ಟು ನಮ್ಮ ಲಾಯರ್ ಇದ್ದಾರೆ ನಾವೋಬ್ಬರೇ ಮಾಡುತ್ತೇವೆನ್ನುವ ಭಾವನೆ ಬರಬಾರದು. ದಯಮಾಡಿ ಹೇಳಿಕೆ ಕೊಡುವುದಕ್ಕಿಂತ ಮೊದಲು ಸದನವನ್ನು ಅರ್ಧ ಗಂಟೆ ಮುಂದೂಡಿ, ಮಾನ್ಯ ವಿರೋಧ ಪಕ್ಷದ ನಾಯಕರ ಸಲಹೆಯನ್ನು ತೆಗೆದುಕೊಂಡು ಏನು ವಸ್ತುಸ್ಥಿತಿ ಇದೆ ಎಂದು ತಿಳಿಸಿ, ಆಮೇಲೆ ಹೇಳಿಕೆ ಕೊಡಿ ಎನ್ನುವುದು ನನ್ನ ಭಾವನೆ. ನಿಮ್ಮ ಮತ್ತು ಮಾನ್ಯ ನೀರಾವರಿ ಮಂತ್ರಿಗಳು ಹೇಳಿಕೆ ಕೊಟ್ಟ ತಕ್ಷಣ ಆ ಹೇಳಿಕೆಯಿಂದ ಏನು ಪರಿಣಾಮ ಬೀರುತ್ತದೋ ಗೊತ್ತಿಲ್ಲ. ಇಲ್ಲದಿದ್ದರೆ ನಮ್ಮ ರಾಜ್ಯಕ್ಕೆ ಅನ್ಯಾಯವಾದರೂ ಪರವಾಗಿಲ್ಲ, ಕಾವೇರಿ ಬೇಸಿನ್ ಜನ ಹೊಡೆದಾಡಿಕೊಂಡು ಸಾಯಲಿ ಎನ್ನುವ ಭಾವನೆ ನಿಮಗೇನಾದರೂ ಇದ್ದರೆ, ನೀವು ಹೇಳಿಕೆ ಕೊಟ್ಟು ಏನಾದರೂ ಮಾಡಿಕೊಳ್ಳಿ. ನೀವು ಹೇಳಿಕೆ ಕೊಡುವುದಕ್ಕಿಂತ ಮೊದಲು ಮಾನ್ಯ ವಿರೋಧ ಪಕ್ಷದ ನಾಯಕರನ್ನು ಕರೆಯಬೇಕು. ನಮ್ಮ ವಸ್ತುಸ್ಥಿತಿ ಏನಿದೆ ಎಂದು ತಿಳಿಸಬೇಕು. ನೀವು ಸದನವನ್ನು ಅರ್ಧ ಗಂಟೆ ಮುಂದಕ್ಕೆ ಹಾಕಿ. ಆಮೇಲೆ ಏನು ಬೇಕಾದರೂ ಹೇಳಿಕೆ ಕೊಡಿ. ಈಗ ಹೇಳಿಕೆ ಕೊಡುವುದನ್ನು ನಿಲ್ಲಿಸಬೇಕು. ನಾನು ಮಾನ್ಯ ಮುಖ್ಯಮಂತ್ರಿಗಳಿಗೆ ಮನವಿ ಮಾಡುತ್ತೇನೆ. ನೀವು ನಿಮ್ಮ Advocate General ರವರನ್ನು ಕರೆಸಿ. ನಮ್ಮ ರಾಜ್ಯದಲ್ಲಿ ವಸ್ತುಸ್ಥಿತಿ ಏನಿದೆ? ನಮ್ಮ ರಾಜ್ಯದಲ್ಲಿ ಹೇಮಾವತಿಯಲ್ಲಿ, ಹಾರಂಗಿಯಲ್ಲಿ, ಕಬಿನಿಯಲ್ಲಿ ಮತ್ತು ಕೆಆರ್‌ಎಸ್‌ನಲ್ಲಿ ಎಷ್ಟು ನೀರಿದೆ, ಇವತ್ತು ನಮ್ಮ standing crop ಏನಿದೆ ಎನ್ನುವುದನ್ನು ತಿಳಿಸಬೇಕು. ಇವತ್ತು ನಾವು ಹೊಸ crop ಹಾಕುವುದು ಬೇಡ, ಇರುವಂತಹ standing crop ಉಳಿಸಬೇಕಲ್ಲ? ಅದಕ್ಕೆ ನೀವು ಏನು

ಮಾಡಬೇಕೆಂದು ತಿಳಿದುಕೊಳ್ಳುವುದಕ್ಕೆ ಎಲ್ಲರನ್ನೂ ವಿಶ್ವಾಸಕ್ಕೆ ತೆಗೆದುಕೊಂಡು, ಸಾಧ್ಯವಾದರೆ ನಾಳೆ ಬಜೆಟ್ ಆದ ತಕ್ಷಣ ಮಾನ್ಯ ಪ್ರಧಾನ ಮಂತ್ರಿಗಳನ್ನು ನೀವು ಭೇಟಿ ಮಾಡಿಸಬೇಕು, ಮಾನ್ಯ ವಿರೋಧ ಪಕ್ಷದ ನಾಯಕರನ್ನು ಹಾಗೂ ಕೇಂದ್ರದ ಮಂತ್ರಿಗಳನ್ನು ಕರೆದುಕೊಳ್ಳಬೇಕು, ನಮ್ಮ ರಾಜ್ಯದಲ್ಲಿ ಇವತ್ತು ಈ ಪರಿಸ್ಥಿತಿ ಆಗುತ್ತಿದೆ. ಕಾವೇರಿ ಬೇಸಿನ್ ಜನ ವಿಷ ತೆಗೆದುಕೊಳ್ಳುವುದು ಒಂದೇ ಬಾಕಿ ಉಳಿದಿರುವುದು, ಇನ್ನೇನೂ ಇಲ್ಲ.

ಮಾನ್ಯ ಸಿದ್ದರಾಮಯ್ಯನವರು, ನಾವು ಮತ್ತು ಹಲವಾರು ನಾಯಕರು ಇದು "ಮರಣ ಶಾಸನ" ವೆಂದು ಹೇಳಿದ್ದೇವೆ. ಇದು ಗಂಭೀರವಾದ ವಿಚಾರವಾಗಿದ್ದು, ತಾವು ದಯಮಾಡಿ ಹೇಳಿಕೆಯನ್ನು ಕೂಡುವ ಮೊದಲು ಎಲ್ಲಾ ಮುಖಂಡರುಗಳನ್ನು ಕರೆಸಿ ಮಾತನಾಡಿ, ಆಮೇಲೆ ಹೇಳಿಕೆಯನ್ನು ಕೊಡುವುದು ಸೂಕ್ತವೆಂದು ನನ್ನ ಭಾವನೆಯಾಗಿದೆ. ಮಾನ್ಯ ಸಭಾಧ್ಯಕ್ಷರು, ದಯಮಾಡಿ ಸದನವನ್ನು ಅರ್ಧ ಗಂಟೆ ಕಾಲ ಮುಂದಕ್ಕೆ ಹಾಕಬೇಕೆಂದು ಮನವಿ ಮಾಡುತ್ತಿದ್ದೇನೆ.

ಶ್ರೀ ಟಿ.ಬಿ.ಜಯಚಂದ್ರ:- ಮಾನ್ಯ ಅಧ್ಯಕ್ಷರೆ, ಕಳೆದ ಐದಾರು ತಿಂಗಳುಗಳಿಂದ ಸರ್ವೋಚ್ಚ ನ್ಯಾಯಾಲಯದಿಂದ ಬರುತ್ತಿರುವಂಥ ಎಲ್ಲಾ ತೀರ್ಪುಗಳನ್ನು ಹಾಗೂ-ಹೀಗೂ ಆ ಹೊಡೆತವನ್ನು ತಡೆದುಕೊಂಡು ಬಂದಿದ್ದೇವೆ. ಆದರೆ ಇವತ್ತು ಬಂದಿರುವಂಥ ತೀರ್ಪನ್ನು ತಡೆದುಕೊಳ್ಳುವಂಥ ಶಕ್ತಿ ಕರ್ನಾಟಕದ ಜನರಿಗೆ ಇಲ್ಲ. ನನಗೆ ಇದರಲ್ಲಿ ಎಲ್ಲಿ ಲೋಪವಾಗಿದೆಯೆಂಬ ಅನುಮಾನ ಮೂಡುತ್ತಿದೆ. ಸರ್ವೋಚ್ಚ ನ್ಯಾಯಾಲಯ ನಿನ್ನೆ-ಮೊನ್ನೆ ಮಾಡಿದಂಥ ತೀರ್ಪಿನಲ್ಲಿ, ಅಲ್ಲಿ ಏನು ಒಂದು ಅಭಿಪ್ರಾಯಕ್ಕೆ ಬಂದು ಬಿಟ್ಟಿದ್ದಾರೆಂದರೆ, ಈ ಬಗ್ಗೆ ಒಂದೇ ಒಂದು word ಅನ್ನು ಓದುತ್ತೇನೆ.

"Having regard to the above controversy, we are of the view that the Chairman, Central Water Commission may be requested to appoint the expert committee of three members who shall visit the subject area, delta region of Tamil Nadu comprising of Thiruvanoor, Thanjavoor, Nagapatnam District and report to this Court about the status of the paddy crop in that area latest by February 6th before the Court closes. In the

meanwhile Tamilnadu may release 2 TMC water from its storage to save the standing crop. It is made clear that irrespective of the report that may be given by the expert committee Karnataka shall have to release 2 TMC of water to replenish Mettur".

ಇದು ಏನೆಂಬುದು ಅರ್ಥವಾಗುತ್ತಿಲ್ಲ. ಇವತ್ತು ಬಂದಿರುವಂಥದ್ದು ಏನೆಂದರೆ, ಎರಡು ಟಿ.ಎಂ.ಸಿ. ಹೋಗಿ ಎರಡೂವರೆ ಟಿ.ಎಂ.ಸಿ ಆಯಿತು. ಕೋರ್ಟ್ ಏನು ಅಭಿಪ್ರಾಯಕ್ಕೆ ಬಂದಿದೆಯೆಂದರೆ, ಇವರ ಹತ್ತಿರ ನೀರು ಇದೆ, ಯಾವಾಗ ಬೇಕಾದರೂ ಕೊಡಬಹುದು ಎನ್ನುವ ಅಭಿಪ್ರಾಯಕ್ಕೆ ಬಂತಾ? ಎಂದು ಅನಿಸುತ್ತದೆ. ಎಲ್ಲೋ ಒಂದು ಕಡೆಗೆ ನಮ್ಮಲ್ಲಿ ನೀರಿನ ಸಂಗ್ರಹಣೆ ಸಾಮರ್ಥ್ಯ ಎಷ್ಟಿತ್ತು? ನೀರು ಸಂಗ್ರಹಣೆ ಎಷ್ಟು ಇದೆಯೆಂಬ ವಿಚಾರವನ್ನು ಕೋರ್ಟ್‌ಗೆ ಮನವರಿಕೆ ಮಾಡುವುದರಲ್ಲಿ ವಿಫಲವಾಗಿದ್ದೇವೆಯೇ, ಎಂಬ ಭಾವನೆ ಬರುತ್ತದೆ. ಈಗಾಗಲೇ ಮಾನ್ಯ ವಿರೋಧ ಪಕ್ಷದ ನಾಯಕರು ಅನುಮಾನಗೊಂಡ ರೀತಿಯಲ್ಲಿ ನಾವು ಎಲ್ಲೋ ಒಂದು ಕಡೆ ಅಡ್ವೊಕೇಟ್‌ಗಳನ್ನು impress ಮಾಡುವುದರಲ್ಲಿ ಏನಾದರೂ ಎಡವಟ್ಟು ಆಗಿದೆಯೇ, ಎಂಬ ಭಾವನೆ ಬರುತ್ತದೆ. ನಮಗೆ ವಕೀಲರುಗಳ ಬಗ್ಗೆ ಗೌರವವಿದೆ. ಆದರೆ ಇದು ಕಣ್ಣಿಗೆ ಕಾಣುವ ಕುಡಿಯುವ ನೀರು ಆಗಿದ್ದು, ನಮಗೆ ಕುಡಿಯುವ ನೀರು ಇಲ್ಲ. ಬೆಂಗಳೂರು 100% ಇದರ ಮೇಲೆ depend ಆಗಿದೆ. ಇವತ್ತು ಕನಿಷ್ಠವೆಂದರೂ ಏಳೂವರೆ ಟಿ.ಎಂ.ಸಿ. ನೀರು ಇರಬೇಕೆಂದು ನಾವು ಅಂದಾಜು ಮಾಡಿದ್ದೇವೆ. ಇಂಥ ಸಂದರ್ಭದಲ್ಲಿ ನೀರು ಇಲ್ಲದೇ ಇರುವ ಸಂದರ್ಭದಲ್ಲಿ ನೀರನ್ನು ಕೊಡಿ ಎಂದು ಹೇಳಿದರೆ, ಏನು ಅರ್ಥ? ಮೆಟ್ಟೂರಿನಲ್ಲಿ ನೀರು ಇದೆ, ಅದನ್ನು ಬಿಡಿ, ಆಮೇಲೆ ಅದನ್ನು compensate ಮಾಡಿ ಎಂದರೆ ಏನು ಅರ್ಥ? ಮಾನ್ಯ ರೇವಣ್ಣನವರು ಈ ವಿಷಯವನ್ನು ಕುಳಿತು ಚರ್ಚೆ ಮಾಡಿ ಎಂದು ಹೇಳಿದರು. ಇದು ಕೋರ್ಟ್ ಆರ್ಡರ್ ಆಗಿದ್ದು, ಇದು ಆರ್ಡರ್ ಆಗಿದೆ, black & white ನಲ್ಲಿ ಇವತ್ತು ಬಂದಿದೆ. ಇದರ ಬಗ್ಗೆ ಯಾವ ರೀತಿಯಾಗಿ ಚರ್ಚೆ ಆಗಬೇಕು? ನಾವು ಕೋರ್ಟ್ ಅನ್ನು convince ಮಾಡುವುದಕ್ಕೆ ಸಾಧ್ಯವಿದೆ. ನಮ್ಮಲ್ಲಿ ನೀರು ಇಲ್ಲ, ಇದು ಕುಡಿಯುವ ನೀರಿನ ಪ್ರಶ್ನೆ. It is a priority for everything, ನಮಗೆ ಬೆಳೆ ಇಲ್ಲ,

ಕುಡಿಯುವ ನೀರು ಬೇಕು. ಇಂಥ ಸಂದರ್ಭದಲ್ಲಿ ತೊಂದರೆಯಾಗಿದೆಯೆಂಬುದನ್ನು ಮನವರಿಕೆ ಮಾಡುವುದಕ್ಕೆ ಏನಾದರೂ ಪರ್ಯಾಯವಾದ ಚಿಂತನೆಯನ್ನು ಮಾಡುವಂಥದ್ದು ಸೂಕ್ತವೆಂದು ನನ್ನ ಅಭಿಪ್ರಾಯವಾಗಿದೆ.

ಶ್ರೀ ಹೆಚ್.ಡಿ.ರೇವಣ್ಣ:- ಮಾನ್ಯ ಅಧ್ಯಕ್ಷರೆ, ನಾನು ಯಾವ ಉದ್ದೇಶಕ್ಕೆ ಹೇಳಿದೆಯೆಂದರೆ, ಕೋರ್ಟ್ ಆದೇಶದ ಬಗ್ಗೆ ನಾವು ತಲೆ ಬಾಗೋಣ, ನಾವು ಬೇಡವೆಂದು ಹೇಳುವುದಿಲ್ಲ. ಮಾನ್ಯ ಬಸವರಾಜ ಬೊಮ್ಮಾಯಿಯವರೆ, ನಾನು ನೋಡಿದ paper statement ಪ್ರಕಾರ ಮೆಟ್ಟೂರು ಡ್ಯಾಮ್‌ನಿಂದ 2 ಟಿ.ಎಂ.ಸಿ. ನೀರನ್ನು ಬಿಡಬೇಕೆಂದು ಮೊನ್ನೆ ಆದೇಶವಾಗಿದೆ. ಈ ಬಗ್ಗೆ ನಮ್ಮ ವಕೀಲರು ಯಾವ ರೀತಿ ವಾದ ಮಾಡಿದ್ದಾರೆಂಬುದು ನನಗೆ ಗೊತ್ತಿಲ್ಲ. ತಾವು ದಯಮಾಡಿ ತಮ್ಮ ಹೇಳಿಕೆಯನ್ನು ಕೊಡುವುದಕ್ಕಿಂತ ಮುಂಚೆ ನಮ್ಮ ಎರಡೂ ಪಕ್ಷಗಳ ನಾಯಕರುಗಳನ್ನು ಕರೆಸಿ, ಮಾತನಾಡಿದ ಮೇಲೆ ಹೇಳಿಕೆಯನ್ನು ಕೊಡುವುದು ಸೂಕ್ತ, ದಯಮಾಡಿ ಅರ್ಧ ಗಂಟೆ ಕಾಲ ಸಭೆಯನ್ನು ಮುಂದೂಡಿ, ಅದರಲ್ಲಿ ಏನಾದರೂ damage ಆಗುವುದು ಬೇಡವೆಂಬುದು ನನ್ನ ಭಾವನೆ ಇದೆ. ತಾವು ಆಮೇಲೆ ಬೇಕಾದರೆ ಹೇಳಿಕೆ ಕೊಡಿ, ದಯಮಾಡಿ ಈಗ ಸಭೆಯನ್ನು ಮುಂದಕ್ಕೆ ಹಾಕಿ. ಮತ್ತೆ ಏನಾದರೂ ಬೇಕಾದರೆ ನಮ್ಮ ಲೋಕಸಭಾ ಸದಸ್ಯರುಗಳನ್ನು, central Ministers ಎಲ್ಲರನ್ನೂ ಪ್ರಧಾನ ಮಂತ್ರಿಗಳ ಬಳಿಗೆ ಕರೆದುಕೊಂಡು ಹೋಗಿ ಮಾತನಾಡೋಣ.

ಶ್ರೀ ಟಿ.ಬಿ.ಜಯಚಂದ್ರ:- I have an objection for this, ಸುಪ್ರೀಂ ಕೋರ್ಟ್ ಆರ್ಡರ್ ಮಾಡಿದ್ದಾರೆ.

ಶ್ರೀ ಹೆಚ್.ಡಿ.ರೇವಣ್ಣ:- ಮಾನ್ಯ ಅಧ್ಯಕ್ಷರೆ, ನಿನ್ನೆ ವರದಿ ಪ್ರಕಾರ ಕಾನೂನು ಮಂತ್ರಿಗಳನ್ನು ತಮಿಳುನಾಡಿನ ಮಂತ್ರಿಗಳೆಲ್ಲಾ ಇವತ್ತು notification ಮಾಡಿ ಎಂದು ಒತ್ತಾಯ ಮಾಡುತ್ತಾ ಕುಳಿತಿದ್ದಾರೆ. ಕೇಂದ್ರ ಸರ್ಕಾರದ ಕಾನೂನು ಮಂತ್ರಿಗಳ ಮನೆ ಬಾಗಿಲಿನಲ್ಲಿ ತಮಿಳುನಾಡಿನ ಸದಸ್ಯರುಗಳು ಧರಣಿ ಕುಳಿತುಕೊಳ್ಳುತ್ತಿದ್ದಾರೆ. ದಯಮಾಡಿ ಇದರಲ್ಲಿ ರಾಜಕೀಯ ಬೆರೆಸುವುದು ಬೇಡ.

ಶ್ರೀ ಟಿ.ಬಿ.ಜಯಚಂದ್ರ:- It is a direction given by the Supreme Court. ಇದರಲ್ಲಿ ರಾಜಕೀಯವಾಗಬಾರದೆಂಬ ದೃಷ್ಟಿಯಿಂದ ಹೇಳುತ್ತಿರುವುದು.

ಶ್ರೀ ಹೆಚ್.ಡಿ.ರೇವಣ್ಣ:– ನಾನು ರಾಜಕೀಯ ಆಗಬಾರದೆಂಬ ದೃಷ್ಟಿಯಿಂದಲೇ ಕರೆದು ಮಾತನಾಡಿ ಎಂದು ಹೇಳುತ್ತಿರುವುದು.

(ಗೊಂದಲ)

ಶ್ರೀ ಟಿ.ಬಿ.ಜಯಚಂದ್ರ:– ಸರ್ವೋಚ್ಚ ನ್ಯಾಯಾಲಯ ಕೊಟ್ಟಿರುವಂಥ ತೀರ್ಪಿಗೆ ಒಂದು ಕಡೆ ತಲೆ ಬಾಗಬೇಕೆಂದು ಹೇಳುತ್ತೀರಿ, ನೀರು ಬಿಡುವ ವಿಚಾರದಲ್ಲಿ Prime minister ಹತ್ತಿರ ಹೋಗಬೇಕೆಂದು ಹೇಳಿದರೆ, ಇದು ಯಾವ ರೀತಿ? ಇದರಲ್ಲಿ ಕೇಂದ್ರ ಸರ್ಕಾರದ ಪ್ರಶ್ನೆ ಇಲ್ಲ. ಇದನ್ನು ಸುಪ್ರೀಂ ಕೋರ್ಟ್‌ಗೆ ಮನವರಿಕೆ ಮಾಡಬೇಕೇ ವಿನಹ ಈ ರೀತಿಯ ಸಲಹೆ ಅಲ್ಲ.

ಶ್ರೀ ಹೆಚ್.ಡಿ.ರೇವಣ್ಣ:– ಮಾನ್ಯ ಅಧ್ಯಕ್ಷರೆ, ನಾನು ಮಾನ್ಯ ಮುಖ್ಯಮಂತ್ರಿಯವರ ಗಮನಕ್ಕೆ ತರುವುದೇನೆಂದರೆ, ಕೇಂದ್ರ ಸರ್ಕಾರದ ಕಾನೂನು ಮಂತ್ರಿಗಳ ಮನೆ ಹತ್ತಿರ ತಮಿಳುನಾಡಿನ ಲೋಕಸಭೆಯ ಸದಸ್ಯರುಗಳು ಅಧಿಸೂಚನೆಯನ್ನು ಹೊರಡಿಸಬೇಕೆಂದು ಒತ್ತಾಯ ಮಾಡುತ್ತಿದ್ದಾರೆ. ಇಂಥ ಸನ್ನಿವೇಶದಲ್ಲಿ ನಮ್ಮ ರಾಜ್ಯದ ಕೇಂದ್ರ ಸರ್ಕಾರದ ಮಂತ್ರಿಗಳು ಇರಬಹುದು, ಲೋಕಸಭೆಯ ಸದಸ್ಯರುಗಳು ಇರಬಹುದು, ಕಣ್ಣು ಮುಚ್ಚಿಕೊಂಡು ಕುಳಿತಿದ್ದಾರೆ. ಇವರು ರಾಜ್ಯದ ಹಿತದೃಷ್ಟಿಯಿಂದ ಒತ್ತಾಯ ಮಾಡಬೇಕು. ನಾವು ಧರಣಿ ಮಾಡಬೇಕಾಗುತ್ತದೆ. ತಾವು ದಯಮಾಡಿ ಕರೆದು ಮಾತನಾಡಿ. ನಂತರ ಹೇಳಿಕೆಯನ್ನು ಕೊಡಿ.

ಶ್ರೀ ಸಿದ್ದರಾಮಯ್ಯ:– ಮಾನ್ಯ ಅಧ್ಯಕ್ಷರೆ, ನಾನು ನಿನ್ನೆಯಿಂದ ಮಾನ್ಯ ರೇವಣ್ಣನವರನ್ನು ನೋಡುತ್ತಿದ್ದೇನೆ. ಇದರಲ್ಲಿ ಕೇಂದ್ರ ಸರ್ಕಾರ interfere ಆಗಬೇಕು, Prime Minister interfere ಆಗಬೇಕೆಂದು ಹೇಳುತ್ತಿದ್ದಾರೆ. ಇದು Prime Minister interfere ಆಗುವಂಥ ವಿಚಾರವಲ್ಲ. ಕೇಂದ್ರ ಸರ್ಕಾರ represent ಮಾಡುವಂಥ ವಕೀಲರು solicitor general ಅಲ್ಲಿ ಇದ್ದಾರೆ. ಕೇಂದ್ರ ಸರ್ಕಾರದ ಪರ file ಮಾಡುವವರು ಅಲ್ಲಿರುತ್ತಾರೆ. ಅವರು ಕೇಂದ್ರ ಸರ್ಕಾರದ ಅಭಿಪ್ರಾಯವನ್ನು ಏನು ಹೇಳಬೇಕೋ? ಅದನ್ನು ಅವರು ಸುಪ್ರೀಂ ಕೋರ್ಟ್‌ಗೆ ಹೇಳಿರುತ್ತಾರೆ. ಕೇಂದ್ರ ಸರ್ಕಾರ ಯಾವುದೇ ರಾಜ್ಯದ ಪರವಾಗಿ ವಾದ ಮಾಡುವುದಕ್ಕೆ ಹೋಗುವುದಿಲ್ಲ. ಇಲ್ಲಿ ಸುಪ್ರೀಂ ಕೋರ್ಟ್‌ನವರು ಎರಡೂ ರಾಜ್ಯಗಳ ಬಗ್ಗೆ ಕೇಂದ್ರ ಸರ್ಕಾರ argument ಗಳನ್ನು ಕೇಳಿ, ಈ ಆದೇಶವನ್ನು ಮಾಡಿದ್ದಾರೆ. ಈ ಆದೇಶ ನಮ್ಮ ರಾಜ್ಯಕ್ಕೆ ನಮ್ಮ ಜನರಿಗೆ ಮಾರಕವಾಗಿದೆ. ನಮ್ಮ ಬೆಳೆಗಳಿಗೆ ನೀರು ಇಲ್ಲವೇ ಇಲ್ಲ, ಬೇಸಿಗೆ ಬೆಳೆಗಳಿಗೆ ಒಂದು ಹನಿ ನೀರನ್ನೂ ಕೊಡುವುದಕ್ಕೆ ಆಗುವುದಿಲ್ಲ. ನಾವು ಬೆಳೆಗಳನ್ನು

ಮರೆತು ಬಿಟ್ಟಿದ್ದೇವೆ. ನಾವು ನಮ್ಮ ರೈತರಿಗೂ ಈ ಸಾರಿ ಬೆಳೆಗಳನ್ನು ಏನೂ ಬೆಳೆಯುವುದಕ್ಕೆ ಆಗುವುದಿಲ್ಲ, ಏನೂ ಹಾಕುವುದಕ್ಕೆ ಹೋಗಬೇಡಿ ಎಂದು ಹೇಳಿದ್ದೇವೆ. ನಮಗೆ ಇನ್ನು ಕುಡಿಯುವ ನೀರು ಉಳಿದುಕೊಂಡಿರುವಂಥದ್ದು. ನಮ್ಮ ಬಳಿ ಇನ್ನು 13–14 ಟಿ.ಎಂ.ಸಿ. ನೀರು ಉಳಿದುಕೊಂಡಿದೆಯೆಂದು ನಿನ್ನೆ ಕೊಟ್ಟಿರುವ ಅಂಕಿ–ಅಂಶದಲ್ಲಿ ಹೇಳುತ್ತಾರೆ. ಎಷ್ಟು evaporation ಆಗುತ್ತದೆ ಎನ್ನುವ ಲೆಕ್ಕವಿಲ್ಲ. ಬಿಸಿಲಿಗೆ 2 ಟಿ.ಎಂ.ಸಿ ನೀರು evaporation ಆಗಬಹುದು. ನಮಗೆ 12 ಟಿ.ಎಂ.ಸಿ. ನೀರು ಬೇಕೆನ್ನುವಾಗ ಅಲ್ಲಿ ಇರುವುದೇ 12 ಟಿ.ಎಂ.ಸಿಯಲ್ಲಿ 2 ಟಿ.ಎಂ.ಸಿ. ನೀರು evaporate ಆಗಿ ಹೋದರೆ, we will be short with 2 TMC of water. ನೀರನ್ನು ಎಲ್ಲಿಂದ ಕೊಡುವುದು? ಇಂಥ ಪರಿಸ್ಥಿತಿಯಲ್ಲಿ ನೀರನ್ನು ಕೊಡುವುಕ್ಕೆ ಆಗುತ್ತದೆಯೇ? ಈ ವಿಷಯವನ್ನು ತಾವು ಸುಪ್ರೀಂ ಕೋರ್ಟ್‌ಗೆ ಮನವರಿಕೆ ಮಾಡಿ ಕೊಡಬೇಕು., ತಾವು ನಮ್ಮನ್ನು ಮೀಟಿಂಗ್‌ಗೆ ಕರೆದರೆ ನಾವು ಬರುತ್ತೇವೆ, ನಾವು ನಮ್ಮ ಅಭಿಪ್ರಾಯಗಳನ್ನು ಹೇಳುತ್ತೇವೆ. It is a different thing. ಆದರೆ ಇಲ್ಲಿ ಇದು ಕಾನೂನು ಹೋರಾಟ ಆಗಬೇಕು. ಕಾನೂನು ಹೋರಾಟವಾಗಬೇಕಾದರೆ, ನಮ್ಮ ಲಾಯರ್‌ಗಳು ಎಲ್ಲೋ ಒಂದು ಕಡೆ ಎಡವಿದ್ದಾರೇನೋ, ಎಂಬ ಸಂಶಯ ನಿನ್ನೆಯಿಂದ ಕಾಡುತ್ತಿದೆ. ಅದಕ್ಕೆ ನಾನು ನಿನ್ನೆಯೂ ಸಲಹೆ ಕೊಟ್ಟಿದ್ದೇನೆ. ತಾವು ಲಾಯರ್‌ಗಳನ್ನು ಬದಲಾವಣೆ ಮಡುವುದಾದರೆ ಮಾಡಿ, ನಮ್ಮ ಬೆಂಬಲವಿದೆ. ನಾನು ನಮ್ಮ ಲಾಯರ್‌ಗಳ ಬಗ್ಗೆ ತಪ್ಪನ್ನು ಕಂಡು ಹಿಡಿಯುತ್ತಿದ್ದೆನೆಂದು ಅಲ್ಲ. ನಮಗೆ ನಿರಂತರವಾಗಿ ಕಾನೂನು ಹೋರಾಟದಲ್ಲಿ ಸೋಲಾಗುತ್ತಿದೆ. ನಮಗೆ ಒಳ್ಳೆಯ ಕೇಸಿದ್ದು, though we are having merit in our case, ನಮಗೆ ಸೋಲಾಗುತ್ತಿದೆ. ಏಕೆ ಹೀಗೆ ಆಗುತ್ತಿದೆಯೆಂಬುದು ಸಂಶಯಕ್ಕೆ, ಆತಂಕಕ್ಕೆ ಎಡೆ ಮಾಡಿ ಕೊಟ್ಟಿದೆ. ಅದಕ್ಕೋಸ್ಕರ ತಾವು ಲಾಯರ್‌ಗಳನ್ನು change ಮಾಡುವುದಾದರೆ ಮಾಡಿ ಮಾನ್ಯ ಜಲಸಂಪನ್ಮೂಲ ಸಚಿವರು ಕೂಡಲೇ ಹೋಗಬೇಕಾಗುತ್ತದೆ. ತಾವು ಇಲ್ಲಿ ಬಜೆಟ್ ಮಂಡನೆ ಮಾಡಬೇಕಾಗಿದೆ, ಇಲ್ಲ ತಾವು ಈಗ ಹೋಗಿ ಬರುವುದಾದರೆ ಹೋಗಿ ಬನ್ನಿ, ಇಲ್ಲ ಬಜೆಟ್ ಮಂಡನೆ ಮಾಡಿ ಹೋಗುತ್ತೇನೆಂದು ಹೇಳುವುದಾದರೆ ಬಜೆಟ್ ಮಂಡನೆ ಮಾಡಿ ಹೋಗಿ. ತಾವು ಕೂಡಲೇ ಹೋಗಿ ಈ ಆದೇಶವನ್ನು ನಾವು ಪಾಲನೆ ಮಾಡುವುದಕ್ಕೆ ಕಷ್ಟವಾಗುತ್ತದೆಂದು ಹೇಳಿ ಸುಪ್ರೀಂ ಕೋರ್ಟ್‌ಗೆ ಹೇಗಾದರೂ ಮಾಡಿ ಮನವರಿಕೆ ಮಾಡಿ ಕೊಡಬೇಕು. ನಮ್ಮ ಎಲ್ಲಾ facts and figures ಅನ್ನು ground reality ಯನ್ನು ಸದನದ ಮುಂದೆ ಇಡಬೇಕು. ಈಗ ಕೇಂದ್ರ ಸರ್ಕಾರ

interfere ಆಗುವಂಥದ್ದು ಏನೂ ಉಳಿದಿಲ್ಲ. ಇದರಲ್ಲಿ ಕೇಂದ್ರ ಸರ್ಕಾರ Prime Minister ಆಗಲಿ, ನಮ್ಮ ಮಂತ್ರಿಗಳು, ಎಂ.ಪಿ.ಗಳು ಸುಪ್ರೀಂ ಕೋರ್ಟ್‌ಗೆ ಹೋಗಿ ಏನು ಮಾಡುವುದಕ್ಕೆ ಆಗುತ್ತದೆ? ನಾವು ಕೇಂದ್ರ ಸರ್ಕಾರದಿಂದ ಏನಾದರೂ ಕೆಲಸ ಆಗಬೇಕಾದರೆ ಅದನ್ನು ಮಡೋಣ ಅದಕ್ಕೆ ಹಿಂದೆ ಬೀಳಬೆಕಾದ ಅಗತ್ಯವಿಲ್ಲ. ಪ್ರೈಮ್ ಮಿನಿಸ್ಟರ್‌ರವರಿಂದ ಆಗಬೇಕಾದಂಥ ಕೆಲಸವಾದರೆ, ಅದನ್ನು ಮಾಡೋಣ. ಆದರೆ ಸುಮ್ಮಸುಮ್ಮನೆ ಅನಗತ್ಯವಾಗಿ ಪ್ರೈಮ್ ಮಿನಿಸ್ಟರ್ interfere ಆಗಬೇಕು ಎಂದರೆ ಆಗುವುದಿಲ್ಲ. ಈಗ ತಕ್ಷಣಕೆ ಕಾನೂನು ಹೋರಾಟ ಆಗಬೇಕಾಗಿದೆ. ಈ ಆದೇಶವನ್ನು challenge ಮಾಡಬೇಕಾಗುತ್ತದೆ. Challenge ಮಾಡಿ ಸುಪ್ರೀಂ ಕೋರ್ಟಿನಲ್ಲಿ ನಮ್ಮ ವಾದವನ್ನು ಸಮರ್ಥವಾಗಿ ಮಂಡಿಸಿ, ground realityಯನ್ನು ಅವರಿಗೆ ಮನವರಿಕೆ ಮಾಡಿಕೊಡಬೇಕು, ಮನದಟ್ಟು ಮಾಡಿಕೊಡಬೇಕು. ನಾವು ನೀರು ಕೊಡುವುದಕ್ಕೆ ಆಗುವುದೇ ಇಲ್ಲ ಎನ್ನುವ ಪರಿಸ್ಥಿತಿ ಇದೆ ಎನ್ನುವುದನ್ನು ಅವರಿಗೆ ಹೇಳಬೇಕಾಗುತ್ತದೆ. ನೀರು ಕೊಡಬಾರದು ಎಂದಲ್ಲ, ಆದರೆ ನಮ್ಮಲ್ಲಿ ನೀರು ಇಲ್ಲವೇ ಇಲ್ಲ. ಇಂಥ ಪರಿಸ್ಥಿತಿಯಲ್ಲಿ ನಾವು ದೊಡ್ಡ ಕಷ್ಟಕ್ಕೆ ಸಿಕ್ಕಿಹಾಕಿಕೊಳ್ಳುತ್ತೇವೆ. ದಯವಿಟ್ಟು ನೀವು ಕೂಡಲೇ ಹೊರಡಬೇಕು.

ಶ್ರೀ ಹೆಚ್.ಡಿ. ರೇವಣ್ಣ:– ಮಾನ್ಯ ಸಭಾಧ್ಯಕ್ಷರೆ, ನಾನು ಸಿದ್ದರಾಮಯ್ಯನವರಿಗೆ ಮನವಿ ಮಾಡುವುದೇನೆಂದರೆ, ಪ್ರಧಾನ ಮಂತ್ರಿಗಳು interfere ಆಗಬೇಕು ಎಂದು ನಾನು ಹೇಳುತ್ತಿಲ್ಲ. ಕೇಂದ್ರ ಸರ್ಕಾರದ ಕಾನೂನು ಮಂತ್ರಿಗಳ ಹತ್ತಿರ ತಮಿಳುನಾಡಿನ ಲೋಕಸಭಾ ಸದಸ್ಯರು ಒತ್ತಡ ಮಾಡುತ್ತಿರುವುದು ನಿನ್ನೆಯಿಂದ ನಡೆಯುತ್ತಿದೆ. ಇದು ನಮ್ಮ ಗಮನಕ್ಕೆ ಬಂದಿದೆ.

ಶ್ರೀ ಸಿದ್ದರಾಮಯ್ಯ:– ಇದನ್ನು ದೇವೇಗೌಡರು ಹೇಳಿ ಕೊಟ್ಟರೇನು?

ಶ್ರೀ ಹೆಚ್.ಡಿ. ರೇವಣ್ಣ :– ದೇವೇಗೌಡರು ಹೇಳಿಕೊಟ್ಟಿಲ್ಲ ಸ್ವಾಮಿ. ಸಿದ್ದರಾಮಯ್ಯ ನವರಿಗೇನಾದರೂ, ಹೀಗೆ ಸ್ಟೇಟ್‌ಮೆಂಟ್ ಮಾಡಿ ಎಂದು ಪ್ರಧಾನ ಮಂತ್ರಿಗಳು ಹೇಳಿಕೊಟ್ಟಿದ್ದಾರೆಯೇ? ತಮಿಳುನಾಡಿನ 32 ಜನ ಎಂ.ಪಿ.ಗಳಿದ್ದಾರೆ, ನಾವು ಉಳಿದುಕೊಳ್ಳ ಬೇಕಾಗುತ್ತದೆ, ಅದಕ್ಕೆ ನೀವು ಹೀಗೆ ಹೇಳಿಕೆ ಕೊಡಿ ಎಂದು ಪ್ರಧಾನ ಮಂತ್ರಿಗಳು ಹೇಳಿಕೊಟ್ಟಿದ್ದಾರೆಯೇ?

ಅಧ್ಯಕ್ಷರು:– ಗಂಭೀರವಾಗಿ ಚರ್ಚೆ ನಡೆಯುತ್ತಿದೆ, ವಿಷಯಾಂತರ ಬೇಡ.

ಶ್ರೀ ಸಿದ್ದರಾಮಯ್ಯ:– ಈಗ ನಿಮಗೆ ಹೇಳಿಕೊಟ್ಟಿಲ್ಲವೇ?

ಶ್ರೀ ಹೆಚ್.ಡಿ.ರೇವಣ್ಣ: ನನಗೇನೂ ಹೇಳಿ ಕೊಟ್ಟಿಲ್ಲ. ನಾನೂ ನಿಮ್ಮ ಜೊತೆ ಕುಳಿತಿದ್ದೇನಲ್ಲ? ದೇವೇಗೌಡರು ಹೇಳುವುದಲ್ಲ ಅಥವಾ ಬೇರೆ ಯಾರೂ ಹೇಳುವುದಲ್ಲ. ಕೇಂದ್ರದ ಕಾನೂನು ಮಂತ್ರಿಗಳ ಮನೆ ಬಾಗಿಲಲ್ಲಿ ತಮಿಳುನಾಡಿನ ಲೋಕಸಭಾ ಸದಸ್ಯರು ನಿಂತು, notification issue ಮಾಡಬೇಕೆಂದು ಒತ್ತಾಯ ಮಾಡುತ್ತಿದ್ದಾರೆ. ಆ ದೃಷ್ಟಿಯಲ್ಲಿ ನಮ್ಮ ರಾಜ್ಯದ ಲೋಕಸಭಾ ಸದಸ್ಯರಿರಬಹುದು, ಕೇಂದ್ರದ ಮಂತ್ರಿಗಳಿರಬಹುದು, ವಿರೋಧ ಪಕ್ಷದ ನಾಯಕರನ್ನೊಳಗೊಂಡಂತೆ ಎಲ್ಲರೂ ಸೇರಿ ನಾಳೆಯೇ ಒಂದು ಟೀಂ ತೆಗೆದುಕೊಂಡು ಹೋಗೋಣ ಲಕ್ಷಾಂತರ ರೂಪಾಯಿಗಳನ್ನು ಹೆಲಿಕಾಪ್ಟರ್‌ಗಾಗಿ ಖರ್ಚು ಮಾಡುತ್ತೀರಿ. ನಾಳೆ ಬಜೆಟ್ ಆದ ಮೇಲೆ ಇದಕ್ಕೆ ಒಂದು special flight ಮಾಡಿ. ದಯಮಾಡಿ ನಾನು ನಿಮಗೆ ಮನವಿ ಮಾಡುವುದೇನೆಂದರೆ, ನೀವು ಹೇಳಿಕೆ ಕೊಡುವುದಕ್ಕೆ ಮುಂಚೆ ಸಿದ್ದರಾಮಯ್ಯನವರಿಗೆ ಮನವರಿಕೆ ಮಾಡಿ. ಸಿದ್ದರಾಮಯ್ಯನವರಿಗೆ ಮನವರಿಕೆ ಮಾಡಲು ನೀವು ವಿಫಲರಾದರೆ ಆಮೇಲೆ ಇಲ್ಲಿ ಬಂದು ಹೇಳಿಕೆ ಕೊಡಿ, ನಾನು ಬೇಡವೆನ್ನುವುದಿಲ್ಲ. ಅಲ್ಲಿಯವರೆಗೆ ಹೇಳಿಕೆ ಕೊಡುವುದನ್ನು ನಿಲ್ಲಿಸಿ. ದಯಮಾಡಿ ಸಿದ್ದರಾಮಯ್ಯನವರನ್ನು ನಿಮ್ಮ ಜೊತೆ ಕೂರಿಸಿಕೊಳ್ಳಿ. ಈ ರಾಜ್ಯಕ್ಕೆ ತೊಂದರೆಯಾಗಬಾರದು ಎಂದು ನಾನು ಮನವಿ ಮಾಡುತ್ತಿದ್ದೇನೆಯೇ ಹೊರತು ಬೇರೆ ಒತ್ತಾಯವೇನೂ ಇಲ್ಲ.

ಡಾ: ಹೆಚ್.ಸಿ.ಮಹದೇವಪ್ಪ:- ಮಾನ್ಯ ಸಭಾಧ್ಯಕ್ಷರೆ, ನಿನ್ನೆ ಮತ್ತು ಮೊನ್ನೆ ಇಡೀ ಸದನ ಘನತೆವೆತ್ತ ರಾಜ್ಯಪಾಲರ ಭಾಷಣದ ಮೇಲಿನ ವಂದನಾ ನಿರ್ಣಯವನ್ನು ಬದಿಗಿಟ್ಟು ರಾಜ್ಯದಲ್ಲಿರುವ ತೀವ್ರವಾದ ಕುಡಿಯುವ ನೀರಿನ ಅಭಾವದ ಬಗ್ಗೆ ಚರ್ಚೆ ಮಾಡಿ, ನಮ್ಮ ಕೆರೆಕುಂಟೆಗಳು ಮತ್ತು ಜಲಾಶಯಗಳು ಹೇಗೆ ಬತ್ತಿ ಹೋಗಿವೆ ಎಂದು ವಾದ ಮಾಡಿದ್ದಾರೆ. ಈಗ ನಾವು ಬೋರ್‌ವೆಲ್ ಕೊರೆಯಬೇಕಾದರೆ 800 ಅಡಿ ಅಥವಾ 1000 ಅಡಿ ಆಳಕ್ಕೆ ಹೋದರೂ ನೀರು ಸಿಗುತ್ತಿಲ್ಲವೆಂದು ಈ ಸದನದಲ್ಲಿ ಎಲ್ಲಾ ಮಾನ್ಯ ಸದಸ್ಯರು ಚರ್ಚೆ ಮಾಡಿ, ಸರ್ಕಾರದ ಗಮನಕ್ಕೆ ಗಂಭೀರತೆ ವಿಷಯವನ್ನು ತಂದುಕೊಟ್ಟಿದ್ದೇವೆ. ಈಗ ತೀವ್ರವಾದ ಕುಡಿಯುವ ನೀರಿನ ಅಭಾವದ ಪರಿಸ್ಥಿತಿ ಇಡೀ ರಾಜ್ಯದಲ್ಲಿ ಇದೆ. ಅದಕ್ಕೋಸ್ಕರ ವಿಶೇಷವಾದ ಕಾರ್ಯಕ್ರಮವನ್ನು ಕೊಡಬೇಕು ಎಂದು ಹೇಳಿದರೂ ಸಹ ಮಳೆ ಇಲ್ಲದೇ, ಅಂತರ್ಜಲವಿಲ್ಲದೇ, ಭೂಮಿಯ ಮೇಲಾಗಲೀ, ಜಲಾಶಯಗಳ ಮೇಲಾಗಲೀ ದುಡ್ಡು ಕೊಟ್ಟು ಕುಡಿಯುವ ನೀರನ್ನು ಖರೀದಿ ಮಾಡಲು ಆಗುವುದಿಲ್ಲ. ಕಾವೇರಿ ವಿವಾದ ನಮಗೆ ಒಂದು ದೊಡ್ಡ ಸಮಸ್ಯೆ. ಈಗ ಅದು ಕೇಂದ್ರ ಸರ್ಕಾರದ ಆಡಳಿತದ ವ್ಯಾಪ್ತಿಗೆ ಬರತಕ್ಕಂಥಾದ್ದು ಅಲ್ಲ. ನಮ್ಮ ದೇಶದ ಶ್ರೇಷ್ಠ ನ್ಯಾಯಾಲಯ ತೀರ್ಪೊಂದನ್ನು ಕೊಟ್ಟಿದೆ. ಆ ತೀರ್ಪಿನ ಬಗ್ಗೆ ನಾವೆಲ್ಲರೂ ಗೌರವವನ್ನು ಇಟ್ಟುಕೊಂಡಿದ್ದರೂ ಸಹ, ನಿನ್ನೆ ವಿಧಾನಸಭೆಯಲ್ಲಿ ಚರ್ಚೆ ಮಾಡಿದ ಹಾಗೆ ಕುಡಿಯುವ ನೀರಿನ ಅಭಾವದ ಪರಿಸ್ಥಿತಿಯ ಹಿನ್ನೆಲೆಯಲ್ಲಿ ನಾವು ಒಂದು ಹನಿ ನೀರನ್ನೂ ಕೊಡುವುದಕ್ಕಾಗುವುದಿಲ್ಲ ಮತ್ತು ಇರತಕ್ಕಂಥ 12 ಟಿ.ಎಂ.ಸಿ. ನೀರಿನಲ್ಲಿ ಎರಡು ರೀತಿಯ ಲಾಸ್‌ಗಳಾಗುತ್ತವೆ. One is percolation loss and another is evaporation loss. ಈ ಎರಡೂ ಲಾಸ್‌ಗಳಿಂದ ಕನಿಷ್ಠ 3 ರಿಂದ 4 ಟಿ.ಎಂ.ಸಿ. ನೀರು ಹೋದರೆ ಇನ್ನುಳಿಯುವುದು 8 ಅಥವಾ 9 ಟಿ.ಎಂ.ಸಿ. ನೀರು ಮಾತ್ರ. ಮಾಜಿ ಪ್ರಧಾನಿಗಳಾದಂಥ ಸನ್ಮಾನ್ಯ ದೇವೇಗೌಡರೇ ಹೇಳಿದ್ದಾರೆ, ಇದರ ಬಗ್ಗೆ ಭಾವನಾತ್ಮಕವಾಗಿ, emotional ಆಗಿ, sensitive ಆಗಿ ಮಾತನಾಡುವುದರಿಂದ ಏನೂ ಪ್ರಯೋಜನವಾಗುವುದಿಲ್ಲ, ಬೇರೆ ಮಾರ್ಗಗಳನ್ನು ಕಂಡುಹಿಡಿದು ನಾವು ಇದಕ್ಕೆ ಪರಿಹಾರವನ್ನು ಹುಡುಕಬೇಕು ಎಂದು ಹೇಳಿದ್ದಾರೆ. ನಮಗೆ ಇರತಕಂಥ ಬೇರೆ ಮಾರ್ಗವೆಂದರೆ ಅದು ನ್ಯಾಯ ಮಾರ್ಗವೊಂದೇ. ಆ ನ್ಯಾಯ ಮಾರ್ಗದ ಮೂಲಕ ನಿಜವಾಗಿ ನಮಗಿರುವಂಥ

ground reality ಏನಿದೆ ಅದನ್ನು ಅಂದರೆ ನಮಗೇ ಕುಡಿಯುವ ನೀರಿಗೆ ಸಾಲುತ್ತಿಲ್ಲ, ಇರುವಂಥ 12 ಟಿ.ಎಂ.ಸಿ ನೀರಿನಲ್ಲಿ percolation loss and evaporation lossಗಳಿಂದ 3 ರಿಂದ 4 ಟಿ.ಎಂ.ಸಿ ನೀರು ಹೋದರೆ ನಾವು ಇನ್ನೂ ಸಂಕಷ್ಟಕ್ಕೆ ಸಿಲುಕುತ್ತೇವೆ. ಆದ್ದರಿಂದ ಒಂದು ಹನಿ ನೀರನ್ನೂ ಕೊಡುವುದಕ್ಕೆ ಸಾಧ್ಯವಿಲ್ಲದೇ ಇರುವಂಥ ಪರಿಸ್ಥಿತಿ ಇದೆ ಎನ್ನುವುದನ್ನು ಕಾನೂನಿನ ಮುಖಾಂತರವೇ ನಾವು ಶ್ರೇಷ್ಠ ನ್ಯಾಯಾಲಯಕ್ಕೆ ತಿಳಿ ಹೇಳಬೇಕು. ಅದಕ್ಕೆ ನಮ್ಮ ದೇಶದಲ್ಲಿರುವ ಶ್ರೇಷ್ಠ ನ್ಯಾಯವಾದಿಗಳ ತಂಡ ರಚಿಸಿ ಅವರ ಮನವೊಲಿಸಿ, ಸಹಾಯ ಪಡೆದುಕೊಳ್ಳಬೇಕು. ಈ ರಾಜ್ಯದ ಜನರು ಸಂಕಷ್ಟದಲ್ಲಿದ್ದಾರೆ, ಕಾವೇರಿ ಕೊಳ್ಳದ ರೈತರಿರಲಿ, ಜನರಲ್ಲಿ ಕುಡಿಯುವ ನೀರಿಗೆ ಹಾಹಾಕಾರವೆದ್ದಿದೆ. ಜನರಿಗೆ ಕುಡಿಯುವ ನೀರು ಕೊಡಬೇಕಾದುದು ಆದ್ಯತೆ. ಆದ್ದರಿಂದ, ನಮಗೆ ನೀರು ಕೊಡುವುದಕ್ಕೆ ಆಗದೇ ಇರುವ ಪರಿಸ್ಥಿತಿ ಇದೆ, ನಮ್ಮಲ್ಲಿರುವ ಜನರಿಗೇ ಕೊಡಲು ಆಗದೇ ಇರುವ ಪರಿಸ್ಥಿತಿ ಇದೆ, ಒಂದು ಹನಿ ನೀರನ್ನೂ ಕೊಡುವುದಕ್ಕೆ ಆಗುವುದಿಲ್ಲ ಎಂದು ನ್ಯಾಯಾಂಗದ ಮೂಲಕ ನಾವು ರಕ್ಷಣೆಯನ್ನು ಪಡೆದುಕೊಳ್ಳಬೇಕು ಎಂದು ನಾನು ಸರ್ಕಾರವನ್ನು ಒತ್ತಾಯ ಮಾಡುತ್ತೇನೆ.

ಶ್ರೀ ಬಸವರಾಜ ಬೊಮ್ಮಾಯಿ (ಜಲಸಂಪನ್ಮೂಲ ಸಚಿವರು):– ಸನ್ಮಾನ್ಯ ಸಭಾಧ್ಯಕ್ಷರೆ, ಈ ವರ್ಷ ಕಳೆದ ವರ್ಷದ ಬರದ ಛಾಯೆ ಮತ್ತು ಕಾವೇರಿ ವಿವಾದ ಸುಪ್ರೀಂ ಕೋರ್ಟಿನಲ್ಲಿ ಕಳೆದ ಜೂನ್‌ನಿಂದ ನಡೆಯುತ್ತಿರುವುದನ್ನು ನಾನು ಈ ಸದನದ ಗಮನಕ್ಕೆ ತರಲು ಇಚ್ಛೆಪಡುತ್ತೇನೆ. ಸುಮಾರು ಆರು I.A.ಗಳನ್ನು ತಮಿಳುನಾಡಿನವರು ಹಾಕಿದರು. ನಾಲ್ಕು I.A.ಗಳನ್ನು ಸುಪ್ರೀಂ ಕೋರ್ಟ್ ಗಂಭೀರವಾಗಿ ಪರಿಗಣಿಸಲಿಲ್ಲ. ಐದು ಮತ್ತು ಆರನೇ I.A.ಗಳು ಇನ್ನೂ ಕೂಡ ಜೀವಂತವಾಗಿವೆ. ಇವತ್ತು ಇಲ್ಲಿ 2–3 ವಿಚಾರಗಳು ಪ್ರಸ್ತಾಪವಾಗಿವೆ. ಒಂದು, ಇವತ್ತಿನ ನಮ್ಮ ಶ್ರೇಷ್ಠ ನ್ಯಾಯಾಲಯದ ಆದೇಶವನ್ನು ಪಾಲನೆ ಮಾಡುವುದು ಕಷ್ಟ ಸಾಧ್ಯ, ಸಾಧ್ಯವಿಲ್ಲ ಎನ್ನುವ ವಾಸ್ತವ ಪರಿಸ್ಥಿತಿ ಕಾವೇರಿ ಜಲಾನಯನ ಪ್ರದೇಶದಲ್ಲಿದೆ. ಅದಕ್ಕಾಗಿ ನೀರು ಬಿಡದೇ ಇರುವಂಥ ಸಂದರ್ಭ ಮತ್ತು ಸುಪ್ರೀಂ ಕೋರ್ಟಿನ ಆದೇಶವನ್ನು ಪಾಲಿಸುವಂಥ ಸಂದರ್ಭ, ಈ ಒಂದು ಇಕ್ಕಟ್ಟಿನಿಂದ ಹೇಗೆ ಪಾರಾಗಬೇಕು ಎನ್ನುವ ಬಗ್ಗೆ ಎಲ್ಲ ನಾಯಕರೂ ಮಾತನಾಡಿದ್ದೀರಿ, ಕೆಲವು ಸೂಚನೆಗಳನ್ನು ಕೂಡ ಕೊಟ್ಟಿದ್ದೀರಿ.

ಇವತ್ತು ಶ್ರೇಷ್ಠ ನ್ಯಾಯಾಲಯದ ಆದೇಶವನ್ನು ಪಾಲನೆ ಮಾಡಿದರೆ ಏನಾಗುತ್ತದೆ? ಮಾಡದಿದ್ದರೆ ಏನಾಗುತ್ತದೆ ಎನ್ನುವುದೂ ಕೂಡ ನಮ್ಮ ಮುಂದೆ ನಮ್ಮ ಅನುಭವದಲ್ಲಿ ಇದೆ. ಪದೇಪದೇ ನಮಗೆ ಹೀಗೇಕೆ ಹಿನ್ನಡೆಯಾಗುತ್ತಿದೆ ಎನ್ನುವ ಪ್ರಶ್ನೆಯನ್ನು ಘ್ನಾನ್ಯ ವಿರೋಧ ಪಕ್ಷದ ನಾಯಕರು ಕೇಳಿದರು. ಇದು ಬಹಳ relevant ಆದಂಥ ಒಂದು ಪ್ರಶ್ನೆ. ನನ್ನ ಭಾವನೆಯಲ್ಲಿ, ಇದಕ್ಕೆ ಎರಡು ಕಾರಣಗಳಿವೆ. ಸುಪ್ರೀಂ ಕೋರ್ಟ್‌ನ ಎಲ್ಲ ಆದೇಶಗಳ ಹಿನ್ನೆಲೆ ಏನಿದೆ ಎಂದರೆ, Interim Order of 1991 which has been already notified. ಇವತ್ತು ನಾವು final order notify ಮಾಡಬಾರದು ಎಂದು ಹೇಳುತ್ತಿದ್ದೇವೆ. Final order notify ಮಾಡದಂತೆ, ಅದಕ್ಕೆ ಏನು ಕಾನೂನು ಹೋರಾಟ ಮಾಡಬೇಕೋ ಅದನ್ನು ಮಾಡೋಣ. ಅದಕ್ಕೆ ಸಾಕಷ್ಟು ಚರ್ಚೆ ಮಾಡಿದ್ದೇವೆ. ಅದಕ್ಕೆ ಮುಂದೆ ಏನು ಕ್ರಮ ತೆಗೆದುಕೊಳ್ಳಬೇಕೋ ತೆಗೆದುಕೊಳ್ಳೋಣ. ಅದಕ್ಕೆ ರಾಜ್ಯ ಸರ್ಕಾರ ಸಿದ್ಧವಿದೆ. ಇವತ್ತು ನಾವು interim ಆದೇಶದ ಒಂದು ಕರಿ ಛಾಯೆಯಲ್ಲಿ ನರಳುತ್ತಿದ್ದೇವೆ. ನಮ್ಮ Supreme Court, C.R.A., C.M.C. ಎಲ್ಲವೂ ಕೂಡ interim ಆದೇಶದ ಅನುಗುಣವಾಗಿ ಪಾಲನೆ ಮಾಡುತ್ತಿದ್ದಾರೆ. ಉದಾಹರಣೆಗೆ ಹೇಳುವುದಾದರೆ, ಫೆಬ್ರವರಿ 6, 2003 ರಂದು ನಮ್ಮ ಜಲಾಶಯದಲ್ಲಿ ಕೇವಲ ಹನ್ನೊಂದೂವರೆ ಟಿ.ಎಂ.ಸಿ ನೀರಿತ್ತು ಅವತ್ತೂ ಕೂಡ ಸುಪ್ರೀಂ ಕೋರ್ಟ್, ನೀರನ್ನು ಬಿಡುಗಡೆ ಮಾಡಬೇಕು ಎಂದು ಆದೇಶ ಮಾಡಿತು. ಆ ಹಿನ್ನೆಲೆಯಲ್ಲಿ ನಾವು ಅಕ್ಟೋಬರ್, ನವೆಂಬರ್‌ನಲ್ಲಿ ನೀರನ್ನು ಬಿಡದಿರುವ ಕಾರಣದಿಂದ ಅದು contempt ಆಗಿ ಕೊನೆಗೆ ಒಂದು ಕಡೆ ನೀರನ್ನೂ ಬಿಟ್ಟೆವು, ಇನ್ನೊಂದು ಕಡೆ ಕೋರ್ಟಿನ ಕ್ಷಮಾಪಣೆಯನ್ನೂ ಕೇಳಿದೆವು. ಅದೇ ಹಿನ್ನೆಲೆಯಲ್ಲಿ ಫೆಬ್ರವರಿಯಲ್ಲಿ 4,500 ಕ್ಯೂಸೆಕ್ಸ್ ನೀರನ್ನು ಏಳು ದಿವಸ ಬಿಟ್ಟು, ಸುಮಾರು ಮೂರು ಟಿ.ಎಂ.ಸಿ. ನೀರನ್ನು ಮೆಟ್ಟೂರಿಗೆ comply ಮಾಡಿರುವಂಥ ಇತಿಹಾಸವಿದೆ, ವಾಸ್ತವಾಂಶವಿದೆ, ದಾಖಲೆಯಿದೆ. ಅಂದೂ ಕೂಡ interim order ಪ್ರಕಾರವೇ ಮಾಡಿರುವುದು. ಅದೇ ರೀತಿ ಇಂದೂ ಕೂಡ interim orderನಿಂದ ನಮಗೆ ಬಾಧಕವಾಗಿದೆ. ಇದು legal frameworkನಲ್ಲಿದ್ದರೆ the extraneous conditions other than the legal framework is the political pressure whenever Madam Jayalalithaa comes to the power. ಈ ಎರಡು ಕಾರಣಗಳಿಂದ

ನಿರಂತರವಾಗಿ I.A. ಮೇಲೆ I.A. ಹಾಕುವಂಥದ್ದು ಮತ್ತು short hearingsಅನ್ನು ತೆಗೆದುಕೊಳ್ಳುವಂಥಾದ್ದು ಇವೆಲ್ಲವೂ ಆಗುತ್ತಿದೆ. ಇವೆಲ್ಲವನ್ನೂ ಅವರು ಮಾಡಬಾರದು ಎಂದು ಅಲ್ಲ. ಈ ಎರಡು ಕಾರಣಗಳಿಂದ ಇವತ್ತು ಸಂಕಷ್ಟ ಉಲ್ಬಣವಾಗಿದೆ.

Sri T.B.JAYACHANDRA: When the issue is before the C,R.A., ನೀವು ಹೇಳಿದ ಹಾಗೆ ಜಯಲಲಿತಾ ಅಧಿಕಾರಕ್ಕೆ ಬಂದಾಗ ಪ್ರಭಾವ ಬೀರುತ್ತದೆ. But, not before the Supreme Court., The matter is before the Supreme Court.

ಶ್ರೀ ಹೆಚ್.ಡಿ.ರೇವಣ್ಣ:– ಮಾನ್ಯ ಅಧ್ಯಕ್ಷರೆ,...

ಅಧ್ಯಕ್ಷರ:– ಆಮೇಲೆ ಕೇಳಿ.

ಶ್ರೀ ಬಸವರಾಜ ಬೊಮ್ಮಾಯಿ(ಜಲ ಸಂಪನ್ಮೂಲ ಸಚಿವರು):– 5 ನಿಮಿಷ ಅವಕಾಶ ಕೊಡಿ. ನೀವು ಹೇಳಿದ್ದನ್ನೆಲ್ಲ ಶಾಂತವಾಗಿ ಕೇಳಿದ್ದೇವೆ. ನೀವು ಕೇಳಿದ ಪ್ರಶ್ನೆಗಳ ಹಿನ್ನೆಲೆಯಲ್ಲಿ ನಾನು ಉತ್ತರ ಕೊಡುತ್ತಿರುವುದು. Interim ಆದೇಶದ ಅನ್ವಯವೇ ಇವತ್ತು Supreme Court ಆದೇಶವನ್ನು ಮಾಡುತ್ತಿದೆ. ಇದೊಂದು ಎರಡನೆಯದಾಗಿ, ಇವತ್ತು ತಮಿಳುನಾಡಿನ Counsel ಗಳನ್ನು Supreme Court ತರಾಟೆಗೆ ತೆಗೆದುಕೊಂಡಿದೆ. ನೀವು ಹೇಳುತ್ತಿರುವುದು ಸುಳ್ಳು, ಸುಳ್ಳು ಪುರಾವೆ ಆಗಿದೆ, ನೀವು ಶಿಕ್ಷೆಗೆ ಅರ್ಹರು ಎನ್ನುವ ಮಾತನ್ನೂ ಕೂಡ ಅವರು ಹೇಳಿದ್ದಾರೆ. ಏಕೆ ಹೇಳಿದ್ದಾರೆಂದರೆ, ಫೆಬ್ರವರಿ 4 ರಲ್ಲಿ ಏನು ಆದೇಶ ಬಂತು, ಅದರ 2 ದಿವಸಗಳ ಹಿಂದೆಯೇ ನಮ್ಮ ರಾಜ್ಯ ಸರ್ಕಾರ ಒಬ್ಬ Agriculture Expert Professor ಅನ್ನು ಮತ್ತು ಒಬ್ಬ ನೀರಾವರಿ Chief Engineer ಅನ್ನು ಇಡೀ ತಮಿಳುನಾಡಿಗೆ 1 ಮತ್ತು 2ನೇ ತಾರೀಖು ಕಳುಹಿಸಿದ್ದೆವು. ಕಳುಹಿಸಿ, ಹೈದರಾಬಾದ್ NRSA Map ಗಳನ್ನು ತರಿಸಿ, ಅದನ್ನು complete analyse ಮಾಡಿ ಒಂದು report ಅನ್ನು ಮಾಡಿ ಅದನ್ನು ನಾವು ಒಂದು affidavit ಮುಖಾಂತರ court ಗೆ ಹಾಜರು ಮಾಡಿದ್ದೇವೆ. ಹಾಜರು ಮಾಡಿದಂಥ ಸಂದರ್ಭದಲ್ಲಿ ತಮಿಳುನಾಡಿನ Lawyers ಇದು ಸುಳ್ಳಿದೆ ಎಂದು ಹೇಳಿದರು. ಅದನ್ನು ನಾವು challenge ಮಾಡಿದ್ದಕ್ಕೆ Central Team ಹೋಯಿತು. ಇವತ್ತು ನಾವು ಕಳುಹಿಸಿದಂಥ, ನಾವು ಮಾಡಿದಂಥ ಪ್ರಯತ್ನ ಸರಿ ಇದೆ ಎನ್ನುವುದು ಇವತ್ತು Supreme Court ನಲ್ಲಿ ಪುರಾವೆ ಆಗಿದೆ. ಈ ಎಲ್ಲಾ ಕೆಲಸಗಳ ಹಿನ್ನೆಲೆಯಲ್ಲಿ ನಾವು ಮಾಡಿದ್ದನ್ನು ತಾವು

ಗಮನಿಸಬಹುದು. ಮೂರನೆಯದಾಗಿ, Lawyers ಬಗ್ಗೆ ಚರ್ಚೆಯಾಯಿತು. ನಮ್ಮ Lawyers ಕುಡಿಯುವ ನೀರಿನ ಬಗ್ಗೆ ಕೋರ್ಟ್‌ನ ಗಮನಕ್ಕೆ ತಂದಿಲ್ಲ ಎನ್ನುವ ಮಾತನ್ನು ಹೇಳಿದರು. ನಾವು affidavit ಹಾಕಿದೇವೆ. Drinking water ಗೆ ನಮಗೆ ಸುಮಾರು 12.5 TMC, ರೇವಣ್ಣನವರು ಹೇಳಿದ ಹಾಗೆ, Standing crop Sugarcane ಗೆ 5 TMC Evaporation loss ಬಗ್ಗೆ ಮಹದೇವಪ್ಪನವರು ಹೇಳಿದರು ಅದಕ್ಕೆ 1 TMC, Environmental lossಗೆ 5.22 TMC, 22.8 TMC ಇಷ್ಟು ನೀರಿನ ಅವಶ್ಯಕತೆ ನಮಗೆ ಇದೆ ಎನ್ನುವ ಮಾತನ್ನೂ ಕೂಡ ನಾವು ಹೇಳಿದ್ದೇವು. ಎಲ್ಲಾವಾದವನ್ನೂ ಮಾಡಿದ್ದೇವೆ. ಎಲ್ಲಾ ಸಮರ್ಪಕ ವಾದವನ್ನು ಮಾಡಿದಾಗಲೂ ಕೂಡ ಈ ತರಹವ ಆದೇಶ ಬಂದಿದೆ. ಹಿಂದೆಯೂ ಕೂಡ ಈ ತರಹದ ಆದೇಶಗಳು ಬಂದಿವೆ. ಅವತ್ತಿನಿಂದ ನಾರಿಮನ್‌ರವರ ನೇತೃತ್ವದಲ್ಲಿ ಒಂದು ತಂಡವಿದೆ. ಅದೇ ತಂಡ ಇವತ್ತೂ ಕೂಡ ಅಲ್ಲಿ ಕೆಲಸ ಮಾಡುತ್ತಿದೆ. ಎರಡನೆಯದಾಗಿ, ಇವತ್ತು 2.44 TMC ನೀರು ಬಿಡಿ ಎಂದು ಏನು ಆದೇಶ ಮಾಡಿದ್ದಾರೆ, ಇಲ್ಲಿ ನಮಗೆ ಆತಂಕವಿರುವುದೇನೆಂದರೆ ಅವರು forthwith ಎಂದು ಹೇಳಿದ್ದಾರೆ. ಕೂಡಲೇ ಅದನ್ನು ಅನುಷ್ಠಾನ ಮಾಡಬೇಕೆಂದು ಹೇಳಿದ್ದಾರೆ. ಹಿಂದೆ ಇದೇ ಕೋರ್ಟ್ ಆದೇಶವನ್ನು ಮಾಡಿದಾಗ CMC ಯವರು schedules ಕೊಡುತ್ತಿದ್ದರು. ಒಂದೊಂದು ತಿಂಗಳು schedules ಕೊಟ್ಟಿದ್ದಾರೆ, 15 ದಿವಸ schedules ಕೊಟ್ಟಿದ್ದಾರೆ, 2003ರಲ್ಲಿಯೂ ಕೂಡ Supreme Court schedule ಕೊಟ್ಟಿತ್ತು. ಅದು ಯಾವುದನ್ನೂ ಮಾಡದೇ forthwith ಎಂದು ಹೇಳಿದ್ದಾರೆ. ಇದು ನಮಗೆ ಆತಂಕವಾಗಿರುವಂಥದ್ದು. To be complied with Mettur ಎಂದು ಹೇಳಿದ್ದಾರೆ. ಎಲ್ಲಾ grounds ಇದೆ. ತನ್ನದೇ ಆದೇಶದ ವ್ಯತಿರಿಕ್ತವಾಗಿ ಕೆಲವು ವಿಚಾರಗಳನ್ನು, ಹಿಂದಿನ ಆದೇಶದ ವ್ಯತಿರಿಕ್ತವಾಗಿ ವಿಚಾರಗಳನ್ನು Supreme Court ಹೇಳಿದ ಹಿನ್ನೆಲೆಯಲ್ಲಿ ನಮಗೆ ಇವತ್ತು grounds ಇದೆ. ಅದಕ್ಕಾಗಿ ಮಾನ್ಯ ಮುಖ್ಯಮಂತ್ರಿಯವರು ಕೆಲವು ದಿಟ್ಟ ನಿರ್ಣಯವನ್ನು ತೆಗೆದುಕೊಳ್ಳಬೇಕೆಂದು ತೀರ್ಮಾನವನ್ನು ಮಾಡಿದ್ದಾರೆ. ಕಾನೂನು ಹೋರಾಟವನ್ನು ನಾವು ಖಂಡಿತವಾಗಿಯೂ ಮುಂದುವರಿಸುತ್ತೇವೆ. ನಾವು ಯಾವುದೇ ರೀತಿ ಕೂಡಲೇ ನೀರು ಬಿಡುವಂಥ ಆತುರದಲ್ಲಿಲ್ಲ. ಇತರ ಕಾನೂನು ವಿಕಲ್ಪಗಳೇನಿವೆ, ಅವುಗಳನ್ನೆಲ್ಲವನ್ನೂ ಕೂಡ ಪ್ರಯತ್ನ ಮಾಡಿ exhaust ಮಾಡುವಂಥ ಕೆಲಸವನ್ನು ಖಂಡಿತವಾಗಿಯೂ ಮಾಡುತ್ತೇವೆ. ಈ

ಭಾಗದ ಹಿತರಕ್ಷಣೆಗೆ ಸರ್ಕಾರ ಮತ್ತು ವಿರೋಧ ಪಕ್ಷಗಳು ಒಗ್ಗಟ್ಟಾಗಿ ಹೇಗೆ ಬದ್ಧತೆ ತೋರಿಸಿವೆ, ಅದೇರೀತಿ ನಾವು ಬದ್ಧತೆ ತೋರಿಸುತ್ತೇವೆ. ರೇವಣ್ಣನವರು ಹೇಳಿದಂತೆ, ಎಲ್ಲರ ಸಲಹೆ ಸೂಚನೆಗಳನ್ನೂ ಕೂಡ ತೆಗೆದುಕೊಳ್ಳುವುದಕ್ಕೆ ಸಿದ್ಧರಿದ್ದೇವೆ. ಈಗಾಗಲೇ ತಾವು ಕೆಲವು ಸಲಹೆ ಸೂಚನೆಗಳನ್ನು ಕೊಟ್ಟಿದ್ದೀರಿ. ಇದರ ಜೊತೆಗೆ, ಇನ್ನಷ್ಟು ಸಲಹೆ ಸೂಚನೆಗಳಿದ್ದರೆ ಅವುಗಳನ್ನು ಖಂಡಿತವಾಗಿಯೂ ನಾವು ತೆಗೆದುಕೊಳ್ಳುತ್ತೇವೆ. ಕೆಲವು ಕಠಿಣವಾದ ನಿರ್ಣಯ ತೆಗೆದುಕೊಳ್ಳುವಂಥ ಪ್ರಸಂಗ ಬಂದರೂ ಕೂಡ ಅದಕ್ಕೆ ಹಿಂದೆ ಸರಿಯುವುದಿಲ್ಲ. ನೀರು ಬಿಡುವಂಥ ಆತುರದಲ್ಲಿ ಇಲ್ಲ. ಇತರ ಕಾನೂನು ವಿಕಲ್ಪಕ್ಕೆ ನಾವು ಪ್ರಯತ್ನವನ್ನು ಮಾಡುತ್ತೇವೆ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್ (ಮಾನ್ಯ ಮುಖ್ಯಮಂತ್ರಿಯವರು) : ಮಾನ್ಯ ಅಧ್ಯಕ್ಷರೆ, ಮಾನ್ಯ ವಿರೋಧ ಪಕ್ಷದ ನಾಯಕರು, ಮಾನ್ಯ ರೇವಣ್ಣನವರು, ಮಾನ್ಯ ಜಯಚಂದ್ರವರು, ಮಾನ್ಯ ಮಹದೇವಪ್ಪನವರು ಇವತ್ತು Supreme court ನಲ್ಲಿ ಏನು ನಿರ್ಣಯ ಬಂದಿದೆ, ಆ ಹಿನ್ನಲೆಯಲ್ಲಿ ವಿಷಯವನ್ನು ಪ್ರಸ್ತಾಪ ಮಾಡಿದರು. ನಮ್ಮ ನೀರಾವರಿ ಮಂತ್ರಿಯವರಾದ ಶ್ರೀ ಬಸವರಾಜ ಬೊಮ್ಮಾಯಿಯವರು ಅಲ್ಲಿ ನಡೆದಂಥ ಮತ್ತು ಹಿಂದೆ ಆದಂಥ ಘಟನೆಗಳ ಬಗ್ಗೆಯೂ ಸಹ ವಿವರಣೆಗಳನ್ನು ಕೊಟ್ಟಿದ್ದಾರೆ. ಹಿಂದೆ ಬೆಳಗಾಂನಲ್ಲಿ ಅಧಿವೇಶನ ನಡೆದಂಥ ಸಂದರ್ಭದಲ್ಲಿ ಆ ಸಂದರ್ಭದಲ್ಲಿ ಕೂಡ ಕೋರ್ಟ್ ಆಜ್ಞೆಯಾಗಿತ್ತು. ಆ ಸಂದರ್ಭದಲ್ಲಿ ಕೆಲವು ನಿರ್ಣಯ ಕೈಗೊಂಡಿದ್ದೆವು. ನಾವು ಅವತ್ತು ದೆಹಲಿಗೆ ಹೋಗಿ ನಮ್ಮ Advocates ಭೇಟಿಯಾಗಿ ಮುಂದಿನ ಕ್ರಮ ಏನು ಕೈಗೊಳ್ಳಬೇಕೆಂಬ ಬಗ್ಗೆ ಆಲೋಚನೆ ಮಾಡಿದ್ದೆವು. ಈಗ ಪ್ರತಿಪಕ್ಷದ ನಾಯಕರು ಮತ್ತು ಸದಸ್ಯರು ಮಾತನಾಡುವಂಥ ಸಂದರ್ಭದಲ್ಲಿ ಕೋರ್ಟ್‌ನಲ್ಲಿ ನಮ್ಮ Advocates ಸರಿಯಾಗಿ ಕೇಸ್ ನಡೆಸಿದ್ದಾರೋ, ಇಲ್ಲವೋ ಎನ್ನುವಂಥ ಸಂಶಯ ವ್ಯಕ್ತಪಡಿಸಿದರು. ಏಕೆಂದರೆ, ನಾವು ಬಹಳಷ್ಟು ಸಾರಿ ಅವರ ಜೊತೆ ಈ legal battle ಬಗ್ಗೆ ಚರ್ಚೆ ಮಾಡಿದಂಥ ಸಂದರ್ಭದಲ್ಲಿ ಹಲವಾರು ವಿಚಾರಗಳನ್ನು ಚರ್ಚೆ ಮಾಡಿ ಮತ್ತು ಇದಕ್ಕೆ ಯಾವ ರೀತಿ ಕಾನೂನು ಹೋರಾಟ ಮಾಡಬೇಕು ಎನ್ನುವಂಥ ಸಂದರ್ಭದಲ್ಲಿ ಅದಕ್ಕೆ ಅವರು ಸಾಕಷ್ಟು support ಮಾಡಿದ್ದಾರೆ. ಪ್ರತಿ ಹಂತದಲ್ಲಿ ಇಲ್ಲಿರುವಂಥ ಪರಿಸ್ಥಿತಿಯನ್ನು

ಅದರಲ್ಲೂ ಇತ್ತೀಚಿನ ದಿನಗಳಲ್ಲಿ ಅಂದರೆ ಕಳೆದ ಒಂದು ವರ್ಷದಿಂದ ನಮ್ಮ ರಾಜ್ಯ ಅನುಭವಿಸಿದ ಬರದ ಬವಣೆ ಮತ್ತು ಕುಡಿಯುವ ನೀರಿನ ತೊಂದರೆ ಇವೆಲ್ಲವನ್ನೂ ಸಹ ಪ್ರತಿ ಹಂತದಲ್ಲಿ ಕೋರ್ಟ್‌ನಲ್ಲಿ ಮನವರಿಕೆ ಮಾಡುವಂಥ ಎಲ್ಲ ರೀತಿಯ ಪ್ರಯತ್ನವನ್ನು ಅವರು ಮಾಡಿದ್ದಾರೆ. ಹಿಂದೆ CRA meeting ನಡೆದಂಥ ಸಂದರ್ಭದಲ್ಲಿ ನಾವು ಅಲ್ಲಿಯೂ facts, figures ಕೊಟ್ಟಿವು. CMC meeting ಗೆ ನಮ್ಮ Chief Secretary ಯವರು ಹೋದಂಥ ಸಂದರ್ಭದಲ್ಲಿ ಅವರೂ ಎಲ್ಲಾ details ಕೊಟ್ಟಿದ್ದಾರೆ. ಇಲ್ಲಿಯ ಪರಿಸ್ಥಿತಿ ಏನಿದೆ ಎನ್ನುವ ಬಗ್ಗೆ with affidavit ಕೊಟ್ಟಿದ್ದಾರೆ. Affidavit ಹಾಕಿ Supreme Court ಮುಂದೆ ಬೆಂಗಳೂರಿಗೆ ಕುಡಿಯುವ ನೀರು ಎಷ್ಟು ಬೇಕು? ಕಾವೇರಿ ಬೇಸಿನ್‌ನಲ್ಲಿರುವಂಥ ಉಳಿದ ನಗರ, ಪಟ್ಟಣಗಳಿಗೆ ಕುಡಿಯುವ ನೀರು ಎಷ್ಟು ಬೇಕು? Standing crop ಇವೆಲ್ಲದರ ಬಗ್ಗೆ details ಕೊಟ್ಟಿದ್ದೇವೆ. ಇವತ್ತು ಬೆಳಗ್ಗೆ ನಡೆದಂಥ ವಾದದಲ್ಲಿ ಸಹ ನಮ್ಮ Advocates drinking water ಸಮಸ್ಯೆ ಏನಿದೆ ಮತ್ತು ಇವತ್ತು ನಮ್ಮಲ್ಲಿರುವಂಥ KRS ಇರಬಹುದು ಮತ್ತು ಇನ್ನಿತರ ಜಲಾಶಯಗಳಲ್ಲಿ ನೀರಿನ ಸಂಗ್ರಹ ಏನಿದೆ ಅದು ಕೇವಲ ಕುಡಿಯುವ ನೀರಿಗೆ ಮಾತ್ರ ಸಾಲುತ್ತದೆನ್ನುವಂಥ ಮಾಡನ್ನೂ ಇವತ್ತೂ ಹೇಳಿದ್ದಾರೆ. ಇಷ್ಟಾದಮೇಲೂ ಸಹ ಇವತ್ತು ಒಂದು ಆಜ್ಞೆ ಬಂದಿದೆ. ಹೀಗಾಗಿ, ಅದರಲ್ಲಿ 2–3 ಅಂಶಗಳಿವೆ. ಅವುಗಳ ವಿವರಗಳನ್ನು ಈಗಾಗಲೇ ಹೇಳಿದ್ದಾರೆ. Forthwith ಬಿಡುಗಡೆ ಮಾಡಬೇಕೆಂದು ಹೇಳಿದ್ದಾರೆ. CMC meeting ನಡೆದಂಥ ಸಂದರ್ಭದಲ್ಲಿ ಆ scheduleಗಳನ್ನು fix ಮಾಡಿದ್ದರು. 5 TMC, 6 TMC ನೀರು ಇರಬಹುದು ಈ ರೀತಿ ನೀರು ಬಿಡುವಂಥ ಸಂದರ್ಭದಲ್ಲಿ ಅವರು 15 days, 1 month ಈ ರೀತಿ schedule, ಆ month ಗೆ ಒಂದೊಂದು schedule fix ಮಾಡಿದ್ದರು. ಆದರೆ, ಇವತ್ತು forthwith ಎನ್ನುವಂಥದ್ದೇನಿದೆ, ಇದು ಬಹಳಷ್ಟು ಸಮಸ್ಯೆಯಾಗಿದೆ ಎನ್ನುವಂಥ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ಆ ದೃಷ್ಟಿಯಿಂದ ಈ ಕಾವೇರಿ ನದಿ ವಿಚಾರವಾಗಿ ಮೊದಲಿನಿಂದಲೂ ಸಹ ನಮ್ಮ ಸರ್ಕಾರದವರು ಎಲ್ಲಾ ರೀತಿಯಾದಂಥ ಪ್ರಾಮಾಣಿಕ ಪ್ರಯತ್ನವನ್ನು, ಕಾನೂನು ಹೋರಾಟವನ್ನು ಮಾಡಿಕೊಂಡು ಬಂದಿದ್ದೇವೆ. ಹಿಂದಿನ ಇತಿಹಾಸವನ್ನು ನಾವು

ನೋಡಿದಾಗ ಎಲ್ಲಿಂದ ಇದು ಪ್ರಾರಂಭವಾಯಿತು? ಅಲ್ಲಿಂದ ಇಲ್ಲಿಯವರೆಗೆ ಏನೇನಾಯಿತು ಎನ್ನುವ ಘಟನಾವಳಿಗಳನ್ನು ಬೊಮ್ಮಾಯಿಯವರು ಹೇಳಿದರು. ಹೀಗಾಗಿ ಇವತ್ತು ಬಹಳಷ್ಟು ವಿಚಾರಗಳಿವೆ. ಹೀಗಾಗಿ, ನಮ್ಮ Advocates ಜೊತೆಗೆ ಇನ್ನೂ ಇದರ ಬಗ್ಗೆ ಯಾವ ರೀತಿಯ ಕಾನೂನು ಹೋರಾಟ ಮಾಡಬೇಕು ಎನ್ನುವಂಥದ್ದರ ಬಗ್ಗೆ ಕೂಲಂಕುಷವಾಗಿ ನಾವು ಚರ್ಚೆಯನ್ನು ಮಾಡಬೇಕಾಗಿದೆ. ಮಾನ್ಯ ರೇವಣ್ಣನವರು ಸಲಹೆ ಕೊಟ್ಟಹಾಗೆ, ಸದನ adjourn ಆದಮೇಲೆ ಎಲ್ಲಾ Floor Leaders ಕರೆದು, ಅವರು ಈಗಾಗಲೇ ಅವರ ವಿಚಾರಗಳನ್ನು ಹೇಳಿದ್ದಾರೆ, ಇನ್ನೂ ಏನಾದರೂ ಇದ್ದರೆ ಕೇಳುತ್ತೇವೆ. ಸದನದಲ್ಲಿ ಕೆಲವೊಂದು ಸೂಕ್ಷ್ಮತೆ ಬಗ್ಗೆ ನಾವು ಚರ್ಚೆ ಮಾಡಲಿಕ್ಕಾಗುವುದಿಲ್ಲ. ಅವುಗಳ ಬಗ್ಗೆ ಅವರ ಸಲಹೆ ಸೂಚನೆಗಳನ್ನೂ ನಾವು ತೆಗೆದುಕೊಂಡು ನಾಳೆ ಬಜೆಟ್ ಮಂಡನೆ ಮಾಡುವುದು ಇದ್ದಾಗಲೂ ಸಹ ನಾನು decide ಮಾಡಿದ್ದೇನೆ, ನಾನು ಮತ್ತು ನಮ್ಮ ನೀರಾವರಿ ಮಂತ್ರಿಯವರು ತಕ್ಷಣವೇ special flight ಮಾಡಿಕೊಂಡು ದೆಹಲಿಗೆ ಹೋಗುತ್ತಿದ್ದೇವೆ. ಈ ಸದನ adjourn ಆದ ತಕ್ಷಣವೇ ಹೋಗುತ್ತಿದ್ದೇವೆ. ಅಲ್ಲಿ ನಮ್ಮ Advocates ಭೇಟಿಯಾಗಿ ಮುಂದೆ ಇನ್ನೂ ಏನೇನು ಕ್ರಮ ಕೈಗೊಳ್ಳಬೇಕು ಎನ್ನುವ ಸಮಾಲೋಚನೆ ಮಾಡುತ್ತಿದ್ದೇವೆ. ಆ ದೃಷ್ಟಿಯಿಂದ ನಮ್ಮ ನಾಡಿನ, ನೀರಿನ ಪ್ರಶ್ನೆ ಬಂದಾಗ, ನಮ್ಮ ನಾಡಿನ, ರೈತರ ಪ್ರಶ್ನೆ ಬಂದಾಗ ಎಲ್ಲರ ಹಿತ ರಕ್ಷಣೆ ಸಲುವಾಗಿ ಏನು ಮಾಡಬೇಕು, ಆ ಎಲ್ಲವನ್ನೂ ಮಾಡುವಂಥದ್ದಕ್ಕೆ ನಾವು ಪ್ರಾಮಾಣಿಕ ಪ್ರಯತ್ನ ಮಾಡುತ್ತೇವೆ. ಇದರಲ್ಲಿ ಹಿಂದೇಟು ಹಾಕುವಂಥ ಪ್ರಶ್ನೆ ಇಲ್ಲ. ತಕ್ಷಣವೇ ದೆಹಲಿಗೆ ಹೋಗುತ್ತೇವೆ. ಎಲ್ಲ ವಿವರಣೆ ಕೊಟ್ಟು, ಇಲ್ಲಿನ ಪರಿಸ್ಥಿತಿಯನ್ನು ಮತ್ತೊಮ್ಮೆ ಹೇಳಿ ತಕ್ಷಣಕ್ಕೆ ಏನು ಮಾಡಲಿಕ್ಕೆ ಸಾಧ್ಯವಿದೆ ಎನ್ನುವಂಥ ವಿಚಾರವನ್ನೂ ನಾವು ಮಾಡುತ್ತಿದ್ದೇವೆ. ಆ ದೃಷ್ಟಿಯಿಂದ ಮತ್ತು ಪ್ರತಿಪಕ್ಷದ ನಾಯಕರು, ಇನ್ನೂ ಏನಾದರೂ ಸಲಹೆ ಸೂಚನೆ ಇದ್ದರೆ ಕೊಟ್ಟರೆ, ಸದನ adjourn ಆದ ತಕ್ಷಣವೇ ಅವರ ಜೊತೆ ಸಮಾಲೋಚನೆ ಮಾಡಿಕೊಂಡು ನಾವು ಮುಂದಿನ ಕ್ರಮವನ್ನು ಕೈಗೊಳ್ಳುತ್ತೇವೆ.

ಶ್ರೀ ಬಸವರಾಜ ಬೊಮ್ಮಾಯಿ:– ಸದನಕ್ಕೆ ಒಂದು ಮಾಹಿತಿ ಕೊಡುತ್ತಿದ್ದೇನೆ.

ಶ್ರೀ ಹೆಚ್.ಡಿ.ರೇವಣ್ಣ:– ಈ ರಾಜ್ಯದ ಕೇಂದ್ರ ಮಂತ್ರಿಗಳು, ವಿರೋಧ ಪಕ್ಷದ ನಾಯಕರು ಪ್ರಧಾನ ಮಂತ್ರಿ, ಕಾನೂನು ಮಂತ್ರಿ, ನೀರಾವರಿ ಮಂತ್ರಿಯವರಿಗೆ ಇಲ್ಲಿನ ಪರಿಸ್ಥಿತಿಯನ್ನು ಹೇಳಬೇಕಾಗಿದೆ. ನೀವು ಅದನ್ನೂ ಮಾಡಬೇಕಾಗುತ್ತದೆ. ನೀವೊಬ್ಬರೇ ಹೋರಾಟ ಮಾಡುವುದಲ್ಲ. ಎಲ್ಲರನ್ನೂ ವಿಶ್ವಾಸಕ್ಕೆ ತೆಗೆದುಕೊಳ್ಳಬೇಕಾಗುತ್ತದೆ ಎಂದು ನಾನು ಮನವಿ ಮಾಡುತ್ತಿದ್ದೇನೆ.

ಶ್ರೀ ಬಸವರಾಜ ಬೊಮ್ಮಾಯಿ(ಜಲ ಸಂಪನ್ಮೂಲ ಸಚಿವರು):– ಎಲ್ಲರನ್ನೂ ವಿಶ್ವಾಸಕ್ಕೆ ತೆಗೆದುಕೊಂಡು ಮೊದಲನೇ ಹಂತದಲ್ಲಿ ಅವರು ಬಂದರೆ ನಮ್ಮ ನಾರಿಮನ್ ಜೊತೆ ಚರ್ಚೆ ಮಾಡುವುದಕ್ಕೆ ಆಹ್ವಾನ ಕೊಟ್ಟಿದ್ದೇವೆ. ಅಲ್ಲದೆ, ಮುಂದಿನ ವಾರ ಪ್ರಧಾನ ಮಂತ್ರಿಯವರನ್ನು ಭೇಟಿಯಾಗುವ ಸಂದರ್ಭದಲ್ಲಿ ಎಲ್ಲಾ ಪಕ್ಷಗಳ ನಾಯಕರ ಜೊತೆಗೂಡಿ ಈ ಸಮಸ್ಯೆ ಬಗೆಹರಿಸುವುದಕ್ಕೆ, ನಮ್ಮ ಸಂಸತ್‌ಸದಸ್ಯರ ಜೊತೆಗೂಡಿ ಭೇಟಿಯಾಗುವುದಕ್ಕೆ ಎಲ್ಲಾ ಪ್ರಯತ್ನಗಳನ್ನು ನಾವು ಮಾಡುತ್ತೇವೆ. ಈಗ ಸದನಕ್ಕೆ correct ಆಗಿ ಮಾಹಿತಿ ಇರಬೇಕು. ಇವತ್ತು ನಮ್ಮ KRS dam ನಲ್ಲಿ live storage ಇರುವಂಥದ್ದು 6.9 TMC ನೀರು. ಹೇಮಾವತಿಯಲ್ಲಿ 5.4 TMC ನೀರು ಇದೆ. ಕಬಿನಿಯಲ್ಲಿ 1.1 TMC ನೀರು ಇದೆ. ತಮಿಳುನಾಡಿನ ಮೆಟ್ಟೂರಿನಲ್ಲಿ ಇವತ್ತಿಗೆ 8.46 TMC ನೀರು ಇದೆ. ಭಾವಾನಿಯಲ್ಲಿ 3.3 TMC ನೀರು ಇದೆ. ಒಟ್ಟು ಅವರಿಗೆ 11.5 TMC ನೀರು ಎರಡೂ reservoir ಗಳಿಂದ ಇದೆ. ಇದನ್ನು ಈಗಾಗಲೇ ನಮ್ಮ lawyers ಗಮನಕ್ಕೆ ತಂದಿದ್ದಾರೆ. ನಾಳೆ ನಡೆಯುವ ಮುಂದಿನ ಹೋರಾಟದಲ್ಲಿ ಇದನ್ನು ನಾವು ಬಳಕೆ ಮಾಡುತ್ತೇವೆ.

ಅಧ್ಯಕ್ಷರು:– ಈಗ ಸದನವನ್ನು ಮಧ್ಯಾಹ್ನ 2.30 ಗಂಟೆಗೆ ಸೇರುವಂತೆ ಮುಂದೂಡಲಾಗಿದೆ. (ಸದನವು ಮಧ್ಯಾಹ್ನ 1 ಗಂಟೆ 31 ನಿಮಿಷಕ್ಕೆ ಮುಕ್ತಾಯಗೊಂಡು ಪುನ: ಮಧ್ಯಾಹ್ನ 2.30 ಗಂಟೆಗೆ ಸೇರಲು ನಿಶ್ಚಯಿಸಿತು)

(ಸದನವು ಪುನ: ಮಧ್ಯಾಹ್ನ 3 ಗಂಟೆ 3 ನಿಮಿಷಕ್ಕೆ ಸಮಾವೇಶಗೊಂಡಿತು.